ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, 2009ರ ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಹೆಚ್.ಡಿ. ರೇವಣ್ಣ :- ಅಧ್ಯಕ್ಷರೆ, ದಯಮಾಡಿ ಉತ್ತರ ಕರ್ನಾಟಕದ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸಿಕೊಡಿ. ಉಳಿದ ವಿಷಯವನ್ನು ಬೆಂಗಳೂರಿನಲ್ಲಿ ಅಧಿವೇಶನ ಕರೆದಾಗ ಚರ್ಚಿಸೋಣ. ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದಂತೆ ಯಾವುದಾದರೂ ಬಿಲ್ ಇದ್ದರೆ ಮಂಡಿಸಿ, ಚರ್ಚಿಸೋಣ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಅಧ್ಯಕ್ಷರೆ, ಸನ್ಮಾನ್ಯ ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶ ಕಲ್ಪಿಸಿಕೊಡಿ. ಇಲ್ಲವೇ ನಮ್ಮ ಭಾಗದ ಸಮಸ್ಯೆಗಳ ಬಗ್ಗೆಯಾದರೂ ನಾವು ಸರ್ಕಾರದ ಗಮನ ಸೆಳೆಯುತ್ತೇವೆ. ಇದಕ್ಕೆ ತಾವು ಅನುಮತಿ ಕೊಟ್ಟರೆ, ತಮಗೆ ಧನ್ಯವಾದಗಳನ್ನರ್ಪಿಸುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅಧ್ಯಕ್ಷರೆ, ಒಂದು ಗಮನ ಸೆಳೆಯುವ ಸೂಚನೆ ಇದೆ. ನಮಗೆ ಅಪರೂಪಕ್ಕೆ ಬಂದಿದೆ. ಇದು ಮುಗಿದ ನಂತರ ಉಳಿದುದನ್ನು ತೆಗೆದುಕೊಳ್ಳಿ.

2. ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಡಾ॥ ವಿ.ಎಸ್. ಆಚಾರ್ಯ (ಗೃಹ ಸಚಿವರು) (ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಡಾ|| ವಿ.ಎಸ್. ಆಚಾರ್ಯ:- ಮಾನ್ಯ ಅಧ್ಯಕ್ಷರೆ, ಇಡೀ ಸಮಾಜದ ಸ್ವಾಸ್ಥ್ಯ ನೋಡಿಕೊಳ್ಳುತ್ತಿರುವ ವೈದ್ಯರುಗಳು ಮತ್ತು ಅವರ ಸಹಾಯಕರ ಮೇಲೆ ಇತ್ತೀಚೆಗೆ ಹಲ್ಲೆ ನಡೆಸುವ ಪ್ರವೃತ್ತಿ, ಸಣ್ಣಪುಟ್ಟ ಗುಮಾನಿ ಅಥವಾ ವದಂತಿಗಳನ್ನು ನಂಬಿ ಆಸ್ಪತ್ರೆಗಳ ಮೇಲೆ ದಾಳಿ ನಡೆಸುತ್ತಿರುವ ಪ್ರಕರಣಗಳು ಹೆಚ್ಚುತ್ತಿದೆ. ಆ ಬಗ್ಗೆ ಸಾಕಷ್ಟು ದೂರುಗಳು ರಾಜ್ಯದ ಎಲ್ಲಾ ಕಡೆಗಳಿಂದಲೂ ಬರುತ್ತಿದ್ದುದನ್ನು ಗಮನಿಸಿ ಈಗ ಇದಕ್ಕೊಂದು ಕಾಯಿದೆ ತರಬೇಕೆಂದು ಉದ್ದೇಶಿಸಿದ್ದೇವೆ. ಕಾಯಿದೆಯನ್ನು ಕೆಲವು ಇತರ ರಾಜ್ಯಗಳಲ್ಲೂ ಜಾರಿಗೆ ತಂದಿದ್ದಾರೆ. ಪಕ್ಕದ ಆಂಧ್ರಪ್ರದೇಶದಲ್ಲೂ ಈ ಕಾನೂನಿನಡಿ ಕ್ರಮ ಕೈಗೊಂಡಿದ್ದಾರೆ. ಪ್ರಮುಖವಾಗಿ, ಇದರಲ್ಲಿ ವೈದ್ಯರು, ಪ್ಯಾರಾ ಮೆಡಿಕಲ್ಸ್ ಅದೇ ರೀತಿ ಅಧೀನ ಸಿಬ್ಬಂದಿ ಮತ್ತು ಇತರ ಎಲ್ಲಾ ಸಂಬಂಧಿತ ವ್ಯಕ್ತಿಗಳ ಮೇಲಾಗುತ್ತಿರುವ ಹಿಂಸೆಗೆ ಮತ್ತು ಆಸ್ಪತ್ರೆಯಲ್ಲಿ ಆಗುವ ಆಸ್ತಿ-ಪಾಸ್ತಿಗಳ ಹಾನಿ ಬಗ್ಗೆ ನಿಷೇಧಿಸುವ ಪ್ರಕರಣ ಇದಾಗಿದೆ.

ಯಾರು ಈ ಹಿಂಸೆಯಲ್ಲಿ ತೊಡಗಿರುತ್ತಾರೋ, ಅಂತಹವರಿಗೆ ಮೂರು ವರ್ಷಗಳವರೆಗೆ ಸಜೆ ಮತ್ತು 50 ಸಾವಿರ ರೂಪಾಯಿಗಳವರೆಗೆ ದಂಡ ಹಾಕಬಹುದಾದ ಕಲಂ ಇದೆ. ಅಲ್ಲಿ ಆಗಿರುವಂತಹ ನಷ್ಟದ ಎರಡು ಪಾಲಿನಷ್ಟು ಪರಿಹಾರವನ್ನು ಕೊಡಬೇಕೆಂದು ಮಾಡಲಾಗಿದೆ. ಪರಿಹಾರದ ವಸೂಲಾತಿ ಬಗ್ಗೆ ಕೆಲವೊಂದು ವಿಧಿ ವಿಧಾನಗಳಿವೆ. ಇತರ ರಾಜ್ಯಗಳಲ್ಲಿ ಇರುವುದನ್ನೇ ನಾವು ಇಲ್ಲೂ ಕೂಡ ವಿಧೇಯಕದ ರೂಪದಲ್ಲಿ ತಂದಿದ್ದೇವೆ. ಇದರಲ್ಲಿ ಯಾವುದೇ ರೀತಿ ತೊಂದರೆ ಇಲ್ಲ, ಇದು ಈಗಾಗಲೇ judicial scrutiny ಆಗಿದೆ. ದಯವಿಟ್ಟು ವೈದ್ಯರಿಗೆ ಮತ್ತು ಅವರ ಸ್ವತ್ತಿಗೆ ಮತ್ತು ಆಸ್ಪತ್ರೆಗೆ ರಕ್ಷಣೆ ಕೊಡುವಂತಹ ಕಾನೂನಿಗೆ ಬೇಕಾದಂತಹ ಬೆಂಬಲವನ್ನು ಈ ಸದನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

[ಗೊಂದಲ]

ಅಧ್ಯಕ್ಷರು :- ಒಬ್ಬೊಬ್ಬರಾಗಿ ಮಾತನಾಡಿ. ಮಾನ್ಯ ಕರಡಿ ಸಂಗಣ್ಣನವರೆ, ತಮಗೂ ನಾನು ನಂತರ ಮಾತನಾಡಲು ಅವಕಾಶ ಕೊಡುತ್ತೇನೆ. ಈಗ ಮಾನ್ಯ ಬಾಲಕೃಷ್ಣರವರು ಮಾತನಾಡಲಿ.

ಶ್ರೀ ಹೆಚ್.ಸಿ. ಬಾಲಕೃಷ್ಣ [ಮಾಗಡಿ] :- ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ಮಂಡಿಸಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಜೊತೆಗೆ ಕೆಲವು ಮಾರ್ಪಾಡುಗಳನ್ನು ಮಾಡಬೇಕೆಂದು ಕೋರುತ್ತೇನೆ. ಸರ್ಕಾರಿ ಆಸ್ಪತ್ರೆಗಳಿಗೆ ಬಡವರೇ

ಹೋಗುತ್ತಾರೆ. ಅವರಿಗೆ ಸರಿಯಾದ ರೀತಿಯಲ್ಲಿ ಆಸ್ಪತ್ರೆಯ ಸಿಬ್ಬಂದಿಯವರು ಔಷಧೋಪಚಾರವನ್ನು ಮಾಡದಿದ್ದರೆ, ಬಡವರು ರೊಚ್ಚಿಗೆದ್ದು ಕೆಲವು ಸಂದರ್ಭದಲ್ಲಿ ಹಾನಿ ಮಾಡಬಹುದು ಅಥವಾ ತೊಂದರೆ ಮಾಡಬಹುದು. ಅದನ್ನೇ ನೆಪವಾಗಿಟ್ಟುಕೊಂಡು 3 ವರ್ಷಗಳ ಕಾಲ ಜೈಲಿಗೆ ಹಾಕಿ ಶಿಕ್ಷೆಗೊಳಪಡಿಸುವುದು ತುಂಬಾ ಜಾಸ್ತಿಯಾಯಿತು ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಡಾ॥ ವಿ.ಎಸ್. ಆಚಾರ್ಯ :- ಮೂರು ವರ್ಷ ಜೈಲು ಶಿಕ್ಷೆಯಲ್ಲ, ಮೂರು ವರ್ಷಗಳವರೆಗೆ ವಿಧಿಸಬಹುದಾದ ಜೈಲು ಶಿಕ್ಷೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಆದರೆ ಇದರ ದುರುಪಯೋಗ ಕೂಡ ಆಗುತ್ತದೆ. ಯಾವುದಾದರೂ ಸಂದರ್ಭದಲ್ಲಿ ಯಾರಾದರೂ ಸಣ್ಣದಾಗಿ ಬೈದಾಗ, ಅದನ್ನೇ ನೆಪವಾಗಿಟ್ಟುಕೊಂಡು ಈ ಕಾನೂನಿನ ಅಡಿಯಲ್ಲಿ ಶಿಕ್ಷೆ ಕೊಡುವಂತಾಗುತ್ತದೆ. ದಯಮಾಡಿ ಸರ್ಕಾರ ಇದನ್ನು ಅರ್ಥ ಮಾಡಿಕೊಳ್ಳಬೇಕು. ಶ್ರೀಮಂತರು ಯಾರೂ ಕೂಡ ಸರ್ಕಾರಿ ಆಸ್ಪತ್ರೆಗಳಿಗೆ ಹೋಗುವುದಿಲ್ಲ. ಅಲ್ಲಿಗೆ ಹೋಗತಕ್ಕವರೆಲ್ಲರೂ ಬಡವರೇ ಆಗಿದ್ದಾರೆ. ಕೆಲವು ಸಂದರ್ಭಗಳಲ್ಲಿ ಅಚಾತುರ್ಯ ಉಂಟಾದಾಗ, ಅದನ್ನು ಸರಿಯಾದ ರೀತಿಯಲ್ಲಿ ...

ಡಾ॥ ವಿ.ಎಸ್. ಆಚಾರ್ಯ :- Rules frame ಮಾಡುವಾಗ ಆ ಬಗ್ಗೆ ಗಮನ ಕೊಡುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಆ ರೀತಿಯಾದರೆ, ನಾವು ಇದಕ್ಕೆ ಸ್ವಾಗತವನ್ನು ಬಯಸುತ್ತೇವೆ.

ಶ್ರೀ ಕರಡಿ ಅಮರಪ್ಪ ಸಂಗಣ್ಣ (ಕೊಪ್ಪಳ) :- ಮಾನ್ಯ ಅಧ್ಯಕ್ಷರೆ, ಈ ಬಿಲ್ ಅನ್ನು ನಾನು ಸ್ವಾಗತಿಸುತ್ತೇನೆ. ನಗರ ಪ್ರದೇಶದ ಆಸ್ಪತ್ರೆಗಳಲ್ಲಿ ವೈದ್ಯರು ಕೆಲಸ ಮಾಡತಕ್ಕ ಸಂದರ್ಭದಲ್ಲಿ ಸಾಮಾನ್ಯ ಜನರು ಅಥವಾ ಕೆಲವರು ದುಷ್ಕೃತ್ಯಗಳನ್ನು ನಡೆಸಿರುವುದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಕೊಪ್ಪಳದಲ್ಲೂ ಕೂಡ ಇಂತಹ ಘಟನೆ ನಡೆದ ಉದಾಹರಣೆ ಇದೆ. ವೈದ್ಯಕೀಯ ಚಿಕಿತ್ಸೆಗೆ ಹೋದಂತಹ ಸಂದರ್ಭದಲ್ಲಿ ಸಾಮಾನ್ಯ ಜನರು ಇಂತಹ ಕೃತ್ಯಗಳನ್ನು ಮಾಡುವುದಿಲ್ಲ. ಆದರೆ ಕೆಲವೊಮ್ಮೆ ವೈದ್ಯರು ಬೇಕೆಂದೇ ತಮ್ಮ ವ್ಯಕ್ತಿಗತ ಶೀಟೆಗೋಸ್ಕರ ಇಂತಹ ಘಟನೆಗಳು ನಡೆದಿರುವಂತಹ ಉದಾಹರಣೆ ಇದೆ. ಆದ್ದರಿಂದ, ಮಾನ್ಯ ಬಾಲಕೃಷ್ಣರವರು ಹೇಳಿದಂತೆ, ಸ್ವಲ್ಪ ಇದನ್ನು

modify ಮಾಡಬೇಕು. ಈ ಕಾನೂನಿನ ಅಡಿಯಲ್ಲಿ ಮೂರು ವರ್ಷಗಳವರೆಗೆ ಜೈಲಿಗೆ ಹಾಕಬಹುದಾಗಿದೆ ಎಂಬುದನ್ನು ನೀವು ಒಪ್ಪಿಕೊಂಡಿದ್ದೀರಿ. ಅದು ದುರುಪಯೋಗವಾದಂತೆ ತಾವು ರೂಲ್ಸ್ ಮಾಡತಕ್ಕಂಥ ಸಂದರ್ಭದಲ್ಲಿ ಪರಿಗಣಿಸಬೇಕೆಂದು ಅಧ್ಯಕ್ಷರ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ [ತುರುವೇಕೆರೆ] :- ಮಾನ್ಯ ಅಧ್ಯಕ್ಷರೆ, ಇದು ಬಹುಶ: ಏನೊಂದು amendment ತಂದಿದ್ದಾರೆ, ಇದು ಹಳ್ಳಿಗಾಡಿನ ಜನತೆಯ ಬದುಕನ್ನು ಅಸಹನೀಯವಾಗಿಸುವಂತಹ amendment ಆಗಿದೆ. ನಾವೆಲ್ಲರೂ ಪ್ರತಿ ದಿವಸ ಪೇಪರ್‌ನಲ್ಲಿ ನೋಡುತ್ತೇವೆ. ಯಾವುದೇ ಸರ್ಕಾರಿ ಆಸ್ಪತ್ರೆಗೆ ಹಳ್ಳಿಯ ಜನ ಹೋದರೂ ಕೂಡ, ಅಲ್ಲಿ ದುಡ್ಡು ಕೊಟ್ಟರೆ ಮಾತ್ರ ಡೆಲಿವರಿ ಮಾಡುತ್ತಾರೆ. ಇಲ್ಲದಿದ್ದರೆ, ಅವರನ್ನು ಹಾಗೆಯೇ ವಾಪಸ್ ಕಳುಹಿಸಿಬಿಡುತ್ತಾರೆ. ಸೂಕ್ತ ಚಿಕಿತ್ಸೆ ದೊರೆಯದೇ ಹತ್ತಾರು ಮಕ್ಕಳು ಸತ್ತಿರುವುದನ್ನು ನೀವೂ ನೋಡಿದ್ದಿರಿ, ನಾವೂ ನೋಡಿದ್ದೇವೆ. ಆಸ್ಪತ್ರೆಯಲ್ಲಿ ಅನೇಕ ರೀತಿಯ ಕೃತ್ಯಗಳನ್ನು ನೀವು study ಮಾಡಿದರೆ ಬಹುಶಃ ಹಳ್ಳಿ ಜನರಿಗೆ ಇದು ಮಾರಕವಾಗಿದೆ ಎಂದು ಅನ್ನಿಸುತ್ತದೆ. ಎಷ್ಟೋ ಜನ post-mortemಗಾಗಿ ದಿವಸಗಟ್ಟಲೆ ಕಾಯುತ್ತಾರೆ. ಇವತ್ತು ಅದಕ್ಕೂ ಕೂಡ ದುಡ್ಡು ಕೊಡಬೇಕಾದಂತಹ ಪರಿಸ್ಥಿತಿ ಇದೆ. ಯಾವನೋ ಒಬ್ಬ ಬಡವ ಸರ್ಕಾರಿ ಆಸ್ಪತ್ರೆಗೆ ಸೇರಿಕೊಳ್ಳಬೇಕೆಂದರೆ, ಅದಕ್ಕೂ ದುಡ್ಡು ಕೊಡಬೇಕಾದಂತಹ ಪರಿಸ್ಥಿತಿ ಇದೆ. ಯಾವ ಸರ್ಕಾರಿ ಆಸ್ಪತ್ರೆಯಲ್ಲೂ ಪುಕ್ಕಟೆಯಾಗಿ ಚಿಕಿತ್ಸೆ ಸಿಗುತ್ತಿಲ್ಲ. ಹಾಗಾಗಿ ಜನ ಸಿಟ್ಟಿಗೇಳುವುದು ಅಥವಾ ರೊಚ್ಚಿಗೇಳುವುದು ಸಹಜ. ನಾವೇ ಇಲ್ಲಿ ಸಣ್ಣ ಪುಟ್ಟದ್ದಕ್ಕೆ ನಿಮ್ಮ ಮೇಲೆ ಜಗಳಕ್ಕೆ ಬೀಳುತ್ತೇವೆ. ಆ ನೋವನ್ನು ಅನುಭವಿಸುವಂತಹ ರೈತನ ಮಕ್ಕಳು ಜಗಳ ಮಾಡದಿರುತ್ತಾರೆಯೇ? ಆದ್ದರಿಂದ, ನಾನು ಹೇಳುತ್ತಿದ್ದೇನೆ, ಇದೊಂದು ಮಾರಕವಾದಂತಹ ಕಾನೂನಾಗಿದೆ. ಇಷ್ಟೊಂದು ತೀವ್ರವಾದ ಕಣತರವಾದ ಶಿಕ್ಷೆಯನ್ನು ವಿಧಿಸಬೇಕಾಗಿಲ್ಲ. ಒಂದು ಮಗು ಸರಿಯಾದ treatment ಸಿಗದೆ ಸತ್ತು ಹೋದರೆ, ಅದರ ಅಪ್ಪ-ಅಮ್ಮ ಏನು ಮಾಡುತ್ತಾರೆ? ಅವರು ಯಾರ ಮೇಲೆ ಹೋಗಿ ಬೀಳಬೇಕು? ನಿಮ್ಮ ಮೇಲೆ ಬೀಳುವುದಕ್ಕಾಗುತ್ತದೆಯೇ? ಅಥವಾ ನಮ್ಮ ಮೇಲೆ ಬೀಳುವುದಕ್ಕಾಗುತ್ತದೆಯೇ? ನಾನು ನಮ್ಮ ಊರಿನಲ್ಲಿ ಇರುತ್ತೇನೆ, ಇಲ್ಲವೇ ಬೆಂಗಳೂರಿನಲ್ಲಿ ಇರುತ್ತೇನೆ. ಆಗ ಜನರು ಡಾಕ್ಟರ್ ಮೇಲೆಯೇ ಬೀಳಬೇಕಾಗುತ್ತದೆ. ಡೆಲಿವರಿ ಮಾಡುವುದಕ್ಕೆ ನರ್ಸ್ ಇರುತ್ತಾಳೋ ಇಲ್ಲವೋ ಗೊತ್ತಿಲ್ಲ. ಡಾಕ್ಟರ್‌ಗಳು ರಾತ್ರಿ 12 ಗಂಟೆಯಾದರೆ ಬರುವುದಿಲ್ಲ. ಸಂಜೆ 5

ಗಂಟೆಯೊಳಗೇ ಡೆಲಿವರಿ ಆಗಬೇಕೆಂದು ಕಾನೂನು ಏನಾದರೂ ಇದೆಯೇ? ರಾತ್ರಿ 11 ಗಂಟೆಗೆ ಡೆಲಿವರಿಯಾಗುವುದಿಲ್ಲವೇ? ಬೆಳಗಿನ ಜಾವ 3 ಗಂಟೆಗೆ ಡೆಲಿವರಿ ಯಾಗುವುದಿಲ್ಲವೇ? ಆ ಸಂದರ್ಭದಲ್ಲಿ ವೈದ್ಯರು ಬಂದು ಅವರಿಗೆ ಚಿಕಿತ್ಸೆ ಕೊಡದಿದ್ದರೆ, ಅವರಾದರೂ ಏನು ಮಾಡಲು ಸಾಧ್ಯವಿದೆ? ಇಲ್ಲಿ ಅವರಿಗೆ ನೋವಾಗುವುದು ಸಹಜ. ಸಮಾಜದಲ್ಲಿ ಎಲ್ಲಾ ಕಡೆಯೂ ಗಲಾಟೆಯಾಗುತ್ತದೆ. ಮೊನ್ನೆ ವಿಜಯನಗರದ ಆಸ್ಪತ್ರೆಯೊಂದರಲ್ಲಿ ನೋಡಿದ್ದೇನೆ. ಅದರ ಬಗ್ಗೆ ಪೇಪರ್‌ನಲ್ಲೂ ಕೂಡ ವರದಿಯಾಗಿದೆ. ಓರ್ವ ಹೆಣ್ಣುಮಗಳಿಗೆ ಆರು ವರ್ಷದಿಂದ ಮಕ್ಕಳಾಗಿರಲಿಲ್ಲ, ಅವಳಿಗೆ ಮಕ್ಕಳನ್ನು ಕೊಡುತ್ತೇನೆಂದು ವೈದ್ಯರೊಬ್ಬರು ಎರಡೂವರೆ ತಿಂಗಳು ಅವರನ್ನು ಇಟ್ಟುಕೊಂಡು ನಂತರ ಮತ್ತೆ ಅವರನ್ನು ವಾಪಸ್ ಕಳುಹಿಸಿದ. ಆಕೆಯ ಗಂಡ ಅವನನ್ನು ಹೊಡೆದಿದ್ದಾನೆ. ಅಂತಹ ವೈದ್ಯನಿಗೆ ಪೂಜೆ ಮಾಡಬೇಕೇ? ಇಂತಹ ಕಾನೂನನ್ನು ತಂದು ನೀವು ಇನ್ನೂ ಅರಾಜಕತೆ ಮಾಡುವುದಾದರೆ, ಇದು ಮಾರಕವಾಗುತ್ತದೆ. ಒಂದು threat ಇರಬೇಕು, ಅದು ಬೇಡವೆಂದಲ್ಲ. ಇಷ್ಟೊಂದು ತೀವ್ರವಾದಂತಹ, ಕಠಿಣವಾದಂತಹ ಕ್ರಮವನ್ನು ರೈತರ ಮೇಲೆ ತೆಗೆದುಕೊಳ್ಳಬಾರದು. ನಾವೆಲ್ಲರೂ ಸಹ ಹಳ್ಳಿಯಿಂದ ಬಂದಿರತಕ್ಕವರಾಗಿದ್ದೇವೆ. ಅಲ್ಲಿಯ ಸಮಸ್ಯೆ ಗೊತ್ತಿರತಕ್ಕವರಾಗಿದ್ದೇವೆ. ಯಾರೋ strike ಮಾಡಿದರು ಎಂದು, ಅವರನ್ನು please ಮಾಡುವುದಕ್ಕೋಸ್ಕರ, ಇಂತಹ ಕಠಿಣ ಕಾನೂನನ್ನು ದಯಮಾಡಿ ತರಬೇಡಿ. ಏನೋ ಒಂದು ಸಣ್ಣ ಶಿಕ್ಷೆ ಕೊಡುವಂತಹ ಕಾನೂನನ್ನು ಮಾಡಬೇಕೇ ಹೊರತು, ಜೈಲಿಗೆ ಹಾಕುವುದಾಗಲಿ ಅಥವಾ ದಂಡ ಹಾಕುವುದಾಗಲಿ ಸರಿಯಲ್ಲ. ಇದು ಒಂದು ಸೈಡ್ ಆಯಿತು. ಡಾಕ್ಟರ್‌ಗಳು ಬಡ ರೈತರಿಗೆ ಚಿಕಿತ್ಸೆ ಕೊಡದಿದ್ದರೆ, ಅದರಿಂದ ಹೆಣ್ಣು ಮಗು ಸತ್ತರೆ, patientಗೆ ತೊಂದರೆಯಾದರೆ, ಅಂತಹ ವೈದ್ಯರ ವಿರುದ್ಧ ನೀವೇನು ಕ್ರಮ ತೆಗೆದುಕೊಳ್ಳುತ್ತೀರಿ? ಅದನ್ನೂ ಸಹ ನೀವು ಹೇಳಬೇಕಲ್ಲವೇ? ಒಂದು ಸೈಡ್ ಮಾತ್ರ ಹೇಳಿ, ಇನ್ನೊಂದು ಸೈಡ್ ಬಗ್ಗೆ ಏನನ್ನೂ ಹೇಳದಿದ್ದರೆ ಹೇಗೆ? ನಿಮ್ಮ ಡಾಕ್ಟರಿಗೂ ಕೂಡ ನೀವು ಜವಾಬ್ದಾರಿ fix ಮಾಡಬೇಕಲ್ಲವೇ? Government servant 24 hours ಕೆಲಸ ಮಾಡಬೇಕಾಗುತ್ತದೆ. ಅದರಲ್ಲೂ ವಿಶೇಷವಾಗಿ ಡಾಕ್ಟರ್ 24 ಗಂಟೆ ಕೆಲಸ ಮಾಡಬೇಕಾಗುತ್ತದೆ. ಡಾಕ್ಟರ್ ಆಗಲಿ, paramedical staff ಆಗಲಿ, ನರ್ಸ್ ಆಗಲಿ, ಆಸ್ಪತ್ರೆಯಲ್ಲಿ ಇರತಕ್ಕವರಿಗಿ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಬೆಳಗಿನ ಜಾವ 3 ಗಂಟೆಗೆ ಡೆಲಿವರಿ ಮಾಡುವುದಕ್ಕೆ ಡಾಕ್ಟರ್ ಬರುವುದಿಲ್ಲ ಎಂದರೆ ಏನಾಗುತ್ತದೆ? ಅಣ್ಣನಾಗಲಿ,

ತಮ್ಮನಾಗಲಿ ಅಥವಾ ಗಂಡಸಾಗಲಿ ಜಗಳ ಮಾಡುವುದು ಸಹಜ. ಅದು ನಡೆದೇ ನಡೆಯುತ್ತದೆ. ಅಮಾಯಕ ಜನರ ಮೇಲೆ ಕಾನೂನಿನ ಭಯ ಹುಟ್ಟಿಸಿ, ವೈದ್ಯರನ್ನು ಹಾಗೆಂಯೇ free ಬಿಡುವುದು ಸರಿಯಲ್ಲ. ಈ ಕಾನೂನು ಪಾಸಾದರೆ, ಜುಟ್ಟು-ಜನಿವಾರ ಎಲ್ಲವೂ ಅವರ ಕೈಗೇ ಕೊಟ್ಟಂತಾಗುತ್ತದೆ. ಈ ಕಾನೂನು ತಂದಿರುವುದು ತಪ್ಪಾಗಿದೆ, ದಯಮಾಡಿ ಇದನ್ನು withdraw ಮಾಡಿಕೊಳ್ಳಬೇಕು. Withdraw ಮಾಡಿ, ಅದರ ಬದಲಾಗಿ ಸಣ್ಣದಾದ punishment ಕೊಡತಕ್ಕ ಬೇರೆ ಕಾನೂನನ್ನು ತರಬೇಕು. ಜೈಲಿಗೆ ಹಾಕುವಂತಹ ಕಾನೂನು ತರುವುದು ತಪ್ಪಾಗುತ್ತದೆ, ಅದನ್ನು ಕೈ ಬಿಡಬೇಕೆಂದು ಕೋರುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ [ಅರಸೀಕೆರೆ] :- ಮಾನ್ಯ ಅಧ್ಯಕ್ಷರೆ, ನಿಜವಾಗಿ ಯೂ ಸಾಮಾನ್ಯ ರೈತಾಪಿ ಜನಗಳ ಮೇಲೆ ಇದೊಂದು ಮಾರಕವಾದಂತಹ ವಿಧೇಯಕವಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡತಕ್ಕಂಥ ವೈದ್ಯರು ಮತ್ತು ಸಾರ್ವಜನಿಕರ ಮಧ್ಯದಲ್ಲಿ ಪ್ರತಿನಿತ್ಯ ಒಂದಲ್ಲ ಒಂದು ಜಗಳ ನಡೆಯುತ್ತಿರುತ್ತದೆ. ಹುಚ್ಚು ನಾಯಿ ಕಡಿದಾಗ ಜನರು ಚಿಕಿತ್ಸೆಗಾಗಿ ವೈದ್ಯರ ಬಳಿಗೆ ಹೋಗುತ್ತಾರೆ. ಅಲ್ಲಿಗೆ ಹೋದಾಗ ಆಸ್ಪತ್ರೆಯಲ್ಲಿ ಅದಕ್ಕೆ ಬೇಕಾದ ಇಂಜೆಕ್ಷನ್ ಇರುವುದಿಲ್ಲ. ಆದರೂ ಇಂಜೆಕ್ಷನ್ ಕೊಡಬೇಕೆಂದರೆ, ಅದಕ್ಕಾಗಿ 300 ರೂ.ಗಳನ್ನು ಕೊಡಿ ಎಂದು ಕೇಳುತ್ತಾರೆ. ಆ 300 ರೂ.ಗಳನ್ನು ಕೊಡಲು ಇವನ ಬಳಿ ದುಡ್ಡಿರುವುದಿಲ್ಲ. ಅದನ್ನು ಕೊಡುವುದಿಲ್ಲ ಅಥವಾ ಆಮೇಲೆ ತಂದು ಕೊಡುತ್ತೇನೆಂದು ಆತ ಹೇಳುತ್ತಾನೆ. ಆದರೆ ವೈದ್ಯರು ಅಷ್ಟೊಂದು ಪರಿಪೂರ್ಣವಾಗಿ ಇವತ್ತು ಜನಗಳ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಹೆರಿಗೆಯೊಂದನ್ನು ಮಾಡಿಸತಕ್ಕ ಸಂದರ್ಭದಲ್ಲಿ, ಅನಸ್ತೇಶಿಯಾ ಇಲ್ಲದೆ, ಅನಸ್ತೇಶಿಯಾ ಕೊಡುವುದರಲ್ಲಿ ತಪ್ಪಾಗಿ, ಆ ಮಗು ಮತ್ತು ತಾಯಿ ಇಬ್ಬರೂ ಸತ್ತು ಹೋದರು. ಆ ಸಂದರ್ಭದಲ್ಲಿ ಆ ಮಗುವಿನ ತಂದೆ ಏನು ಮಾಡಬೇಕು? ಆ ಸಂದರ್ಭದಲ್ಲಿ ಇದ್ದಂತಹ ಭಾವೋದ್ವೇಗಕ್ಕೆ ಆತ ನಾಲ್ಕಾರು ಮಾತುಗಳನ್ನು ಆಡುತ್ತಾನೆ ಇಲ್ಲವೇ ಡಾಕ್ಟರ್‌ನ್ನು ಛೇಡಿಸುತ್ತಾನೆ. ಅಂತಹ ಸಂದರ್ಭದಲ್ಲಿ ನೀವು ಅವನ ಮೇಲೆ ಆರೋಪ ಹೊರಿಸಿ, ಮೂರು ವರ್ಷಗಳ ಕಾಲ ಜೈಲಿಗೆ ಕಳುಹಿಸುವಂತಹ ಕಾನೂನನ್ನು ತಂದರೆ, ಸಾಮಾನ್ಯ ಜನ ಸರ್ಕಾರಿ ವೈದ್ಯರನ್ನು ಮಾತನಾಡಿಸುವುದಕ್ಕೇ ಆಗುವುದಿಲ್ಲ. ಎಲ್ಲಾ ಸರ್ಕಾರಿ ವೈದ್ಯರು ಈಗಾಗಲೇ ಸಂಜೆ private shops ನಡೆಸುತ್ತಿದ್ದಾರೆ. ಯಾವುದೇ ವೈದ್ಯರು ಆಸ್ಪತ್ರೆಯಲ್ಲಿ ಸರಿಯಾದ

ಚಿಕಿತ್ಸೆಯನ್ನು ನೀಡುತ್ತಿಲ್ಲ. ಆಸ್ಪತ್ರೆಗೆ ಚಿಕಿತ್ಸೆಗೆ ಹೋದರೆ, ಸಾಯಂಕಾಲ ನನ್ನ ಶಾಪಿಗೆ ಬನ್ನಿ, ಚಿಕಿತ್ಸೆ ಕೊಡುತ್ತೇನೆ ಎಂದು ಹೇಳತಕ್ಕಂಥ ಪರಿಪಾಠವಿದೆ. ನಾವು ಇಲ್ಲಿ ಕುಳಿತುಕೊಂಡು ಈ ರಾಜ್ಯದ ಎಲ್ಲಾ ಜನರಿಗೆ ಎಲ್ಲವನ್ನೂ ಒದಗಿಸಿಕೊಡುತ್ತೇವೆ, ಇಲಾಖೆಯಲ್ಲಿ ಸಮರ್ಪಕವಾದಂತಹ ವ್ಯವಸ್ಥೆಯನ್ನು ಮಾಡಿದ್ದೇವೆ ಎಂಬ ಪರಿಜ್ಞಾನದಿಂದ ನಾವಿದ್ದೇವೆ. ಆದರೆ ಅಲ್ಲಿ ಪ್ರತಿನಿತ್ಯ ಗ್ರಾಮಾಂತರ ಪ್ರದೇಶಗಳಲ್ಲಿ ಜನರು ಡಾಕ್ಟರ್‌ಗಳನ್ನು ಹುಡುಕಿಕೊಂಡು ಅಲೆಯುತ್ತಿರುವುದನ್ನು ನೋಡಿದರೆ ಬೇಸರವಾಗು ುತ್ತದೆ. ನಮ್ಮ ಮನೆಯ ಪಕ್ಕದಲ್ಲಿ ಒಬ್ಬರು ಡಾಕ್ಟರ್ ಇದ್ದಾರೆ. ರಾತ್ರಿ 12 ಗಂಟೆ ಅಥವಾ 1 ಗಂಟೆಗೆ ಬಂದು ಜನರು ಅವರನ್ನು ಎಬ್ಬಿಸುತ್ತಿರುತ್ತಾರೆ. ಆಗ ಅವರು ಕಿಹೋಗ್ರಿ, ಏಕೀ ಇಷ್ಟೊತ್ತಿನಲ್ಲಿ ಬಂದು ಎಬ್ಬಿಸುತ್ತೀರಾ?ಕಿ ಎಂದು ಜನರನ್ನು ಗದರಿಸಿ ಕಳುಹಿಸುತ್ತಾರೆ. ಹೆರಿಗೆ ಮಾಡಿಸಬೇಕಾದಂತಹ ಈ ರೀತಿಯ ಡಾಕ್ಟರ್‌ಗಳೂ ಕೂಡ ಇದ್ದಾರೆ. ಇಂತಹ ಡಾಕ್ಟರ್‌ಗಳಿರುವಾಗ, ನೀವು ಪುನಃ ಅವರಿಗೆ ಇಂತಹ ಕಾನೂನೊಂದನ್ನು ಮಾಡಿಕೊಡುತ್ತೇವೆ ಎಂದರೆ ಹೇಗೆ? ಸಣ್ಣ ಪುಟ್ಟ ಗಲಾಟೆಗಳು ಆಗುತ್ತಲೇ ಇರುತ್ತವೆ.

ಆ ಮಧ್ಯದಲ್ಲಿರತಕ್ಕ ಸಾಮರಸ್ಯವನ್ನು ಸ್ವಾಭಿಮಾನದ ಹಿತದೃಷ್ಟಿಯಿಂದ ಮಾಡಬೇಕಾದಂಥ ವ್ಯವಸ್ಥೆ ಇದೆಯೇ ಹೊರತು ಇದನ್ನು ಕಾನೂನಾಗಿ ತಂದು ಅವರ ಮೇಲೆ ಹೇರುವುದಾದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಸಾಮಾನ್ಯ ಜನರು ಯಾರು ಸರ್ಕಾರಿ ಆಸ್ಪತ್ರೆಗೆ ಹೋಗುತ್ತಾರೋ ಅವರಿಗೆ ನಿಜವಾಗಿಯೂ ವೈದ್ಯರುಗಳು ಅವರ ಮಾತುಗಳನ್ನು ಕೇಳುತ್ತಾರೆಯೇ? ಇದು ನಿಜವೆ? ಇದು ನಡೆಯುತ್ತದೆಯೇ? ಎಂಥ ಅವೈಜ್ಞಾನಿಕವಾದ ವಿದೇಯಕವನ್ನು ಈ ರಾಜ್ಯದ ಜನತೆಯ ಮೇಲೆ ಹೇರಲು ತಂದಿರತಕ್ಕದ್ದನ್ನು ನೋಡಿದರೆ ನಿಜವಾಗಿಯೂ ಈ ಸದನದಲ್ಲಿರುವ ಎಲ್ಲಾ ಸದಸ್ಯರುಗಳು ಯೋಚನೆ ಮಾಡಲಿ. ಪಕ್ಷಭೇದವನ್ನು ಮರೆತು ಯೋಚನೆ ಮಾಡಿ. ನಮ್ಮ ಪಕ್ಷದ ಸಚಿವರು ತಂದಿದ್ದಾರೆ, ನಮ್ಮ ಸರ್ಕಾರದವರು ತಂದಿದ್ದಾರೆ ಎನ್ನತಕ್ಕ ಒಂದೇ ಒಂದು ದೃಷ್ಟಿಯಿಂದ ಈ ವಿಧೇಯಕಕ್ಕೆ ಮನ್ನಣೆ ಕೊಡುವುದಾದರೆ ಏನು ರೈತಾಪಿ ಜನರು ಈ ರಾಜ್ಯದಲ್ಲಿ ಇದ್ದಾರೆ, ಸಾಮಾನ್ಯ ಜನರಿದ್ದಾರೆ ಅವರ ಮೇಲೆ ಹೇರತಕ್ಕ ಕೆಟ್ಟ ಮತ್ತು ಘೋರವಾದ ವಿಧೇಯಕವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಪ್ರತಿಯೊಬ್ಬ ಸದಸ್ಯರೂ ಇದನ್ನು ಒಪ್ಪಿಕೊಳ್ಳುತ್ತಾರೆ. ಇದನ್ನು ವಿರೋಧಿಸುತ್ತಾರೆ ಎಂಬ ಭಾವನೆಯಿಂದ ಹೇಳಬಯಸುತ್ತ ಆರೋಗ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ. ನಮ್ಮ ಕ್ಷೇತ್ರದಲ್ಲಿ ಹೋಬಳಿ ಹೆಡ್ ಕ್ವಾರ್ಟರ್ಸ್‌ನಲ್ಲಿ

ಒಂದು ವರ್ಷದಿಂದ ಎಂ.ಬಿ.ಬಿ.ಎಸ್ ಮಾಡಿರುವ ವೈದ್ಯರು ಇಲ್ಲ. ಕೆ.ಪಿ.ಎಸ್.ಸಿ. ಮೂಲಕ ವೈದ್ಯರುಗಳನ್ನು ತೆಗೆದುಕೊಂಡಿದ್ದಾರೆ ಅವರಿಗೆ ನಾವು ಸ್ವಾಗತ ಬಯಸಿದೆವು. ಸ್ವಾಗತಿಸುತ್ತೇನೆ. ಆದರೆ, ಅವರಲ್ಲಿ ಒಬ್ಬರೇ ಒಬ್ಬರು ವೈದ್ಯರು ಅವರಿಗೆ ಹಾಕಿದಂಥ ಸ್ಥಳಕ್ಕೆ ಹೋಗುವುದಕ್ಕೆ ತಯಾರಿಲ್ಲ. ಡ್ಯೂಟಿ ಆರ್ಡರ್ ಕೊಡುತ್ತಾರೆ ಅನಂತರ ಶಿಫಾರಸ್ಸು ಮಾಡಿ ಒಬ್ಬರೂ ಗ್ರಾಮಾಂತರ ಪ್ರದೇಶಕ್ಕೆ ಎಂ.ಬಿ.ಬಿ.ಎಸ್. ಮಾಡಿದ ವೈದ್ಯರುಗಳು ಬರುತ್ತಿಲ್ಲ. ಅವರುಗಳನ್ನು ವೈದ್ಯರನ್ನಾಗಿ ಓದಿಸಲು ಸರ್ಕಾರ ಎಷ್ಟು ಕೋಟಿ ಹಣ ರಾಜ್ಯದ ಬೊಕ್ಕಸದಿಂದ ಕೊಡುತ್ತಿದೆ ಎಂಬುದನ್ನು ಯೋಚನೆ ಮಾಡತಕ್ಕ ಶಕ್ತಿ ಇವತ್ತು ಇಲ್ಲದಿರುವ ಈ ಪರಿಸ್ಥಿತಿಯಲ್ಲಿ ಇವತ್ತು ನಿಜವಾಗಿಯೂ ನೀವು ಒಂದು ಕಾನೂನನ್ನು ತರಬೇಕು.

ಡಾ॥ ಅಶ್ವತ್ಥ ನಾರಾಯಣ :- ನೀವು ಬಿಲ್ಲಿನ ಬಗ್ಗೆ ಮಾತನಾಡುತ್ತಿದ್ದೀರೋ ಅಥವಾ ಕ್ಷೇತ್ರದ ಬಗ್ಗೆ ಮಾತನಾಡುತ್ತಿದ್ದೀರೋ?

(ಗೊಂದಲ)

ಅಧ್ಯಕ್ಷರು :- ಆಗಲಿ, ನಿಮಗೂ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ನಾನು ಎಲ್ಲರ ಪರವಾಗಿ ಹೇಳಿದರೆ ನೀವು ಏನೋ ಹೇಳುತ್ತಿರಲ್ಲ? ಎಲ್ಲದಕ್ಕೂ ಪಕ್ಷ ಮಾಡುತ್ತೀರಲ್ಲಾ? ನೀವು ಅನಂತರ ಮಾತನಾಡಿ.

ಶ್ರೀ ಅಶ್ವತ್ಥ ನಾರಾಯಣ :- ನೀವು ಏನು ಹೇಳುತ್ತೀರಿ?

ಶ್ರೀ ಎಂ.ಟಿ. ಕೃಷ್ಣಪ್ಪ :- ನೀನು ಏನು ಹೇಳುವುದು? ಇದು ಆಗುವುದಿಲ್ಲ.

ಡಾ॥ ಅಶ್ವತ್ಥ ನಾರಾಯಣ :- ನೀವು ಏನು ಮಾತನಾಡುತ್ತೀರ? ನೀವು ಒಬ್ಬರಿಗೆ ಹೇಳಿದ್ದು ಬೇರೆಯವರಿಗೂ ಅನ್ವಯಿಸುತ್ತದೆ. ನಿಮ್ಮ ನಿಮ್ಮ ಜೀವನದಲ್ಲಿ ಯಾವ ರೀತಿಯಾಗಿ ನಡೆದುಕೊಂಡಿದ್ದೀರಿ ಎಂಬುದನ್ನು ನೋಡಿಕೊಳ್ಳಿ.

(ಗೊಂದಲ)

ಅಧ್ಯಕ್ಷರು :- ಯಾರೂ ಪರಸ್ಪರ ಮಾತನಾಡಬೇಡಿ.

ಶ್ರೀ ಎಂ.ಟಿ. ಕೃಷ್ಣಪ್ಪ :- It is an amendment. xxx xxx xxx ನಾವು ಮಾತನಾಡುತ್ತಿರುವುದು ರಾಜ್ಯದ ಜನತೆಯ ಪರವಾಗಿ. xxx xxx. ನನ್ನ ಮಗ ಮತ್ತು ಅಳಿಯ ಇಬ್ಬರೂ ಡಾಕ್ಟರ್.

(ಗೊಂದಲ)

ಡಾ॥ ಅಶ್ವತ್ಥ ನಾರಾಯಣ :- xxx xxx xxx

ಅಧ್ಯಕ್ಷರು :- ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಡಾ॥ ಅಶ್ವತ್ಥ ನಾರಾಯಣ :- xxx xxx xxx

ಶ್ರೀ ಎಂ.ಟಿ. ಕೃಷ್ಣಪ್ಪ :- xxx. ನನ್ನ ಮಗ ಮತ್ತು ಅಳಿಯ ಇಬ್ಬರು ಸಹ ಡಾಕ್ಟರ್. xxx xxx xxx

(ಗೊಂದಲ)

ಅಧ್ಯಕ್ಷರು :- ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಇದು ಒಳ್ಳೆ ಚೆನ್ನಾಗಾಯಿತಲ್ಲ? ಇವರು ಡಾಕ್ಟರ್ ಎಂದು ಕರ್ನಾಟಕ ರಾಜ್ಯದ ರೈತಾಪಿ ಜನರ ಬಗ್ಗೆ ಮಾತನಾಡಬಾರದೆ? ಸಾಮಾನ್ಯ ಜನ ರೈತರ ಬಗ್ಗೆ ನಾವು ಮಾತನಾಡುತ್ತೇವೆ.

ಅಧ್ಯಕ್ಷರು :- ಶಾಸಕರು ತಮ್ಮ ಸಂಯಮವನ್ನು ಕಾಯ್ದುಕೊಂಡು ಹೋಗಬೇಕು. ಸರಿಯಾಗಿ ಮಾತನಾಡುವಂಥ ರೀತಿ, ನೀತಿಯನ್ನು ಕಲಿತುಕೊಳ್ಳಿ.

ಶ್ರೀ ಎಂ.ಟಿ. ಕೃಷ್ಣಪ್ಪ :- ಡಾಕ್ಟರ್‌ಗೆ ಕೊಡುತ್ತಿರುವ ಸಂಬಳ ಸಾಕಾಗುವುದಿಲ್ಲ, ಸಂಬಳ ಜಾಸ್ತಿ ಮಾಡಿ ಬೇಡವೆಂದು ಹೇಳುವುದಿಲ್ಲ. ನೀವು ಏನು ಹಾಗೆ ಆಡುತ್ತೀರಿ?

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಈ ಸದನದಲ್ಲೇ ರೋಪ್ ಹಾಕುತ್ತೀರಲ್ಲಾ? ಆ ರೀತಿಯೆಲ್ಲ ಮಾಡಬಾರದು.

---

xxx ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಜಿ. ಜನಾರ್ದನರೆಡ್ಡಿ :- ಮಾನ್ಯ ಅಧ್ಯಕ್ಷರೆ, ಶಾಸಕರು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ. ಆದರೆ, ಇವತ್ತು ನಮ್ಮ ಅಶ್ವತ್ಥ ನಾರಾಯಣ ರವರಿಗೆ ಆವೇಶ ಬರಲು ಕಾರಣವೇನೆಂದರೆ, ಡಾಕ್ಟರ್‌ಗಳ ಬಗ್ಗೆ ಅವರು ತುಂಬಾ ಕೀಳಾಗಿ ಮಾತನಾಡುತ್ತಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಇಲ್ಲಾ. ಇಲ್ಲಾ.

ಶ್ರೀ ಜಿ. ಜನಾರ್ದನರೆಡ್ಡಿ :- ಇಡೀ ರಾಜ್ಯದಲ್ಲಿರುವ ಡಾಕ್ಟರ್‌ಗಳ ಮನಸ್ಸಿಗೆ ನೋವು ಆಗುವ ರೀತಿಯಲ್ಲಿ ಮಾತನಾಡುವುದು ಬೇಡ. ಅವರು ಅವರ ಅಭಿಪ್ರಾಯವನ್ನು ಹೇಳಲಿ.

ಅಧ್ಯಕ್ಷರು :- ಮಾನ್ಯ ಶಿವಲಿಂಗೇಗೌಡರೆ, ಒಂದು ಮಾತು ಹೇಳುವಂಥದ್ದು, ಯಾರು ಆ ರೀತಿ ನಡೆದುಕೊಂಡು ಹೋಗುತ್ತಾರೆ ಆ ಡಾಕ್ಟರ್ ಬಗ್ಗೆ ನಾವು ಮಾತನಾಡೋಣ. ಆದರೆ, ಎಲ್ಲಾ ಡಾಕ್ಟರ್‌ಗಳು ಆ ರೀತಿ ಎಂದು ನಾವು ತಿಳಿದುಕೊಳ್ಳುವುದು ಬೇಡ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಎಲ್ಲಾ ಡಾಕ್ಟರ್‌ಗಳು ಎಂದು ನಾನು ಹೇಳುವುದಿಲ್ಲ.

ಅಧ್ಯಕ್ಷರು :- ಎಲ್ಲರೂ ಹಾಗೆಯೇ ಎಂದು ಅಲ್ಲ. ಇಡೀ ವೈದ್ಯಕೀಯ ವೃತ್ತಿಗೆ ಇದು ಆಗಬಾರದು.

ಒಬ್ಬ ಮಾನ್ಯ ಸದಸ್ಯರು :- ಅವರು ಇರತಕ್ಕ ಕಟು ಸತ್ಯವನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು :- ಈ ಚರ್ಚೆಯಲ್ಲಿ ಮಾತನಾಡತಕ್ಕವರು ಬಹಳ ಜನರಿದ್ದಾರೆ. ಆದ್ದರಿಂದ, ಎಲ್ಲರೂ ಸಂಕ್ಷಿಪ್ತವಾಗಿ ಮುಗಿಸಿ. ಹೇಳಿದ್ದನ್ನೇ ಮತ್ತೆ ಮತ್ತೆ ಹೇಳಬೇಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಯಾವುದೇ ಕಾರಣದಿಂದ ಎಲ್ಲಾ ಡಾಕ್ಟರ್‌ಗಳನ್ನು ಒಂದೇ ಕೋಲಿನಿಂದ ಅಳೆಯುವುದಕ್ಕೆ ನಾನು ತಯಾರಿಲ್ಲ. ನಮಗೆ ಬಹಳ ಆತ್ಮೀಯವಾದಂಥ ಡಾಕ್ಟರ್‌ಗಳಿದ್ದಾರೆ. ಹಗಲು ರಾತ್ರಿ ಸೇವೆ ಮಾಡುವಂಥ ಡಾಕ್ಟರ್‌ಗಳಿದ್ದಾರೆ. ಪ್ರಾಮಾಣಿಕರಿದ್ದಾರೆ. ಕೆಲವೊಂದು ಡಾಕ್ಟರ್‌ಗಳು, ನಾನು ಹೇಳುತ್ತಿರುವುದು ಸ್ಪೆಸಿಫಿಕ್ ಆಗಿ ಒಂದು ಆಸ್ಪತ್ರೆಯಲ್ಲಿ ಎರಡು ಮೂರು ಜನ ಜನರಿದ್ದಾರೆ. ಅಂಥವರೇ ಕೇಸ್ ಮಾಡುವವರು. ಅಂಥವರೇ ಮೊಕದ್ದಮೆಗಳನ್ನು ಹಾಕಿಸುವವರು. ಅಂಥವರಿಗೆ ನೀವು ಉತ್ತೇಜನ ಕೊಡುವ ರೀತಿಯಲ್ಲಿ ನೀವು

ವ್ಯವಹರಿಸಿದ್ದೀರಿ ಎನ್ನತಕ್ಕ ಮಾತನ್ನು ಹೇಳಿದ್ದೇನೆಯೇ ಹೊರತು ಎಲ್ಲಾ ಡಾಕ್ಟರ್‌ಗಳ ಬಗ್ಗೆ ನಾನು ಹೇಳಿಲ್ಲ. ಆದರೆ, ಕೆ.ಪಿ.ಎಸ್.ಸಿ. ಮೂಲಕ ಡಾಕ್ಟರ್‌ಗಳನ್ನೇನು ತೆಗೆದುಕೊಂಡಿದ್ದಾರೆ ಅವರನ್ನು ಯಾವ ಊರಿಗೆ ನೇಮಕ ಮಾಡುತ್ತಾರೆ ಅದೇ ಊರಿಗೆ ಆ ಡಾಕ್ಟರ್‌ಗಳು ಹೋಗಿ ಕಾರ್ಯನಿರ್ವಹಿಸಬೇಕು ಎಂಬ ಆದೇಶವನ್ನು ಕಟ್ಟುನಿಟ್ಟಾಗಿ ಕೊಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಆರೋಗ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಡಾ॥ ಸಾರ್ವಭೌಮ ಬಗಲಿ (ಇಂಡಿ) :- ಮಾನ್ಯ ಅಧ್ಯಕ್ಷರೆ, ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ವಿಧೇಯಕ, 2009 ನ್ನು ಸ್ವಾಗತಿಸುತ್ತೇನೆ. ಏಕೆಂದರೆ, ಕಳೆದ ಕೆಲವು ತಿಂಗಳಿನಲ್ಲಿ ತಾವು ನೋಡಿದ್ದೀರಿ. ವೈದ್ಯರು ತಮ್ಮ ಸೇವೆಯನ್ನು ಮಾಡತಕ್ಕ ಸಮಯದಲ್ಲಿ ಕೆಲವೊಂದು ಸಲ ರೋಗಿಗೆ ಮರಣ ಸಂಭವಿಸುತ್ತದೆ. ವೈದ್ಯರು ಸಾವಿಗೆ ಔಷಧಿಯನ್ನು ನೀಡುವುದಿಲ್ಲ. ವೈದ್ಯರು ರೋಗಿಗಳಿಗೆ ಔಷಧಿಯನ್ನು ಕೊಡುತ್ತಿದ್ದಾರೆ. ಖಾಯಿಲೆಗೆ ಔಷಧಿ ಕೊಡುತ್ತಿದ್ದಾರೆ. ಸಾವಿಗೆ ಔಷಧಿ ಡಾಕ್ಟರ್ ಹತ್ತಿರ ಇದ್ದರೆ, ಜಗತ್ತಿನಲ್ಲಿ ಯಾರೂ ಸಹ ಸಾಯುತ್ತಿರಲಿಲ್ಲ. ಆದರೆ, ಒಬ್ಬ ರೋಗಿ ಆಸ್ಪತ್ರೆಯಲ್ಲಿ ಯಾವುದೇ ಕಾರಣಕ್ಕೆ ಸಾವನ್ನಪ್ಪಿದರೆ ವೈದ್ಯರ ನಿರ್ಲಕ್ಷ್ಯದಿಂದ ಸಾವಾಗಿದೆಯೆಂದು ಎಮೋಷನ್‌ನಲ್ಲಿ ವೈದ್ಯರುಗಳ ಮೇಲೆ ಹಲ್ಲೆ ನಡೆದಿರುವುದನ್ನು ನಾವು ನೊಡುತ್ತಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಇಂಥ ಗಾಬರಿ ಇರುವ ವಾತಾವರಣದಲ್ಲಿ ವೈದ್ಯರುಗಳು ಕಾರ್ಯನಿರ್ವಹಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ವೈದ್ಯರುಗಳ ಮೇಲೆ ಹಲ್ಲೆಯಾಗುತ್ತಿದೆ. ಇದನ್ನು ತಡೆಯುವುದಕ್ಕೋಸ್ಕರ ಸೇವೆ ಮಾಡುವಂಥ ವೈದ್ಯರುಗಳಿಗೆ ಶಾಂತ ರೀತಿಯಿಂದ ಸೇವೆ ಮಾಡುವ ವಾತಾವರಣ ನಿರ್ಮಾಣ ಮಾಡುವುದಕ್ಕೋಸ್ಕರ ಅವರಿಗೆ ರಕ್ಷಣೆ ಮಾಡುವ ಸಲುವಾಗಿ ಈ ಕಾನೂನನ್ನು ಏನು ತಂದಿದ್ದಾರೆ ಇದು ಅತ್ಯಂತ ಸ್ವಾಗತಾರ್ಹವಾದದ್ದು. ಇದರಲ್ಲಿ ಹೆಚ್ಚಿನ ದಂಡ ಕೊಡುವ ವಿಚಾರವಿಲ್ಲ. ಅದನ್ನು ಬಹಳ ಸಂತೋಷದಿಂದ ಸ್ವಾಗತಿಸುತ್ತೇನೆ. ಇಲ್ಲಿಯವರೆಗೆ ಮಾತನಾಡಿದಂಥ ಸದಸ್ಯರುಗಳು ಸರ್ಕಾರಿ ಆಸ್ಪತ್ರೆಯಲ್ಲಿ ಯಾರೂ ಡಾಕ್ಟರ್‌ಗಳು ಕೆಲಸ ಮಾಡುತ್ತಿಲ್ಲವೆಂದು ಹೇಳಿದರು. ಇವತ್ತು ಸರ್ಕಾರಿ ಆಸ್ಪತ್ರೆಗೆ ಎಷ್ಟು ಜನ ರೋಗಿಗಳು ಬರುತ್ತಿದ್ದಾರೆ? ಪ್ರತಿ ದಿವಸ ಸರ್ಕಾರಿ ಆಸ್ಪತ್ರೆಗೆ ಬರುತ್ತಿರುವ ಹೊರ ರೋಗಿಗಳ ಸಂಖ್ಯೆ 5 ಲಕ್ಷಕ್ಕಿಂತ ಜಾಸ್ತಿ ಇದೆ. ವೈದ್ಯರುಗಳು ಸರಿಯಾಗಿ ಚಿಕಿತ್ಸೆಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ ನೀಡದಿದ್ದರೆ

ಅಷ್ಟೊಂದು ಸಂಖ್ಯೆಯಲ್ಲಿ ರೋಗಿಗಳು ಸರ್ಕಾರಿ ಆಸ್ಪತ್ರೆಗೆ ಹೇಗೆ ಬರುತ್ತಿದ್ದರು? ನಮ್ಮ ಸರ್ಕಾರ ಬಂದ ನಂತರ, ನಮ್ಮ ಆರೋಗ್ಯ ಸಚಿವರು ಬಂದ ನಂತರ ನಮ್ಮ ಇಲಾಖೆಯಲ್ಲಿ ಅಭಿವೃದ್ಧಿಯನ್ನು ಮಾಡಿದರು.

ಅಧ್ಯಕ್ಷರು :- ಬಗಲಿಯವರೆ, ತಾವು ಬಿಲ್ಲಿನ ಬಗ್ಗೆ ಮಾತ್ರ ಮಾತನಾಡಿ.

ಡಾ॥ ಸಾರ್ವಭೌಮ ಬಗಲಿ :- ಈ ಸರ್ಕಾರ ತಂದಿರುವ ಈ ವಿಧೇಯಕದಲ್ಲಿ ಕಠಿಣವಾದ ಶಿಕ್ಷೆಯೇನಿಲ್ಲ. ಶಿಕ್ಷೆ ದೀರ್ಘಾವಧಿಯದ್ದಲ್ಲ. ಆದ್ದರಿಂದ, ಸರ್ಕಾರ ತಂದಿರುವ ಈ ಬಿಲ್ಲನ್ನು ನಾನು ಸ್ವಾಗತಿಸುತ್ತೇನೆ ಮತ್ತು support ಮಾಡುತ್ತೇನೆ.

ಶ್ರೀ ಬಿ.ಕೆ. ಸಂಗಮೇಶ್ವರ್ (ಭದ್ರಾವತಿ) :- ಮಾನ್ಯ ಅಧ್ಯಕ್ಷರೆ, ಏನು ಈ ವಿಚಾರವನ್ನು ಇಟ್ಟಿದ್ದೀರಿ ಇದರಿಂದ ಕೇವಲ ಡಾಕ್ಟರ್‌ಗಳಿಗೆ ಮತ್ತು ನರ್ಸ್‌ಗಳಿಗೆ ಅನುಕೂಲವಾಗುತ್ತದೆ. ಆದರೆ, ಜನಸಾಮಾನ್ಯರ ಬಗ್ಗೆ ಚಿಂತನೆಯನ್ನು ಮಾಡಬೇಕು. ಭದ್ರಾವತಿಯಲ್ಲಿ ನಾವು ನೂರು ಬೆಡ್ ಆಸ್ಪತ್ರೆ ಮಾಡಿದರೂ ಸಹ ಅಲ್ಲಿ ಇರುವುದು ಮೂರೇ ಜನ ಡಾಕ್ಟರ್‌ಗಳು. ಅಲ್ಲಿ ಎಲ್ಲಾ ಕೊರತೆಗಳು ಇದೆ. ಈ ರೀತಿ ಕೊರತೆ ಒಂದು ಕಡೆ ಇದ್ದಾಗ ರೋಗಿ ಹೋದಂಥ ಸಂದರ್ಭದಲ್ಲಿ ಡಾಕ್ಟರ್‌ಗಳು ರೋಗಿ ಒಳಕ್ಕೆ ಹೋಗುತ್ತಿದ್ದಂತೆಯೇ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಎಂದು ಹೇಳುತ್ತಾರೆ. ಅವನಿಗೆ ಏನಾದರೂ ಸ್ವಲ್ಪ ಗಾಯವಾಗಿದ್ದರೆ ನರ್ಸ್‌ಗಳು ಮುಟ್ಟಲು ಹೇಸಿಗೆ ಪಟ್ಟುಕೊಳ್ಳುತ್ತಾರೆ.

ಈ ಸಂದರ್ಭದಲ್ಲಿ ರೋಗಿಗಳು ಸ್ವಲ್ಪ ಉದ್ರೇಕಕ್ಕೆ ಒಳಗಾಗುವುದು ಸಹಜ. ಆಗ ಅವರು ನಿರ್ಲಕ್ಷವನ್ನು ತೋರಿದಾಗ ನೀವು ಅವರಿಗೇನು ರಕ್ಷಣೆ ಮಾಡುತ್ತೀರಿ? ರೋಗಿಗಳ ಬಗ್ಗೆ ನಿರ್ಲಕ್ಷ್ಯವನ್ನು ತೋರುವ ವೈದ್ಯರಾಗಿರಬಹುದು, ನರ್ಸ್‌ಗಳಾಗಿರಬಹುದು ಅಥವ ನೌಕರರಾಗಿರಬಹುದು, ಅವರ ಬಗ್ಗೆ ಏನು ಕ್ರಮ ಜರುಗಿಸುವುದಕ್ಕೆ ನಿರ್ಣಯ ತೆಗೆದುಕೊಳ್ಳುತ್ತೀರೆಂದು ದಯಮಾಡಿ, ಸದನಕ್ಕೆ ತಿಳಿಸಬೇಕು.

ಶ್ರೀ ಹೆಚ್.ಎಸ್. ಶಂಕರಲಿಂಗೇ ಗೌಡ [ಚಾಮರಾಜ] :- ಮಾನ್ಯ ಸಭಾಧ್ಯಕ್ಷರೆ, ಮೈಸೂರಿನ ಆಸ್ಪತ್ರೆಗಳ ಬಗ್ಗೆ ನಾನು ಮಾತನಾಡುತ್ತೇನೆ. ಮನುಷ್ಯನಿಗೆ ಒಳ್ಳೆಯ ಆರೋಗ್ಯ ಮತ್ತು ಒಳ್ಳೆಯ ಬುದ್ಧಿ ಜೀವನದ ಎರಡು ವರದಾನಗಳು. ಸಾವು ಮತ್ತು ಪ್ರಕೃತಿ ಎಂದೂ ತನ್ನ ಸೋಲನ್ನು ಒಪ್ಪಿಕೊಳ್ಳುವುದಿಲ್ಲ. ಅರಸನಾಗಲಿ, ಧನಿಕನಾಗಲಿ, ನಾನಾಗಲಿ, ನೀವಾಗಲಿ ಸಾಯಲೇಬೇಕು. ಸಾಯುವ ಮೊದಲು

ಸಮಾಜದಲ್ಲಿರುವ ಕೆಳವರ್ಗದ ಜನರನ್ನು ಮೇಲಕ್ಕೆ ಎತ್ತತಕ್ಕಂಥ ಕೆಲಸವನ್ನು ವೈದ್ಯರು ಮತ್ತು ದಾದಿಯರು ಮಾಡಬೇಕು. ನಾನು ಮೂರು ದಿವಸದಿಂದ ಈ ಸದನವನ್ನು ಗಮನಿಸುತ್ತಿದ್ದೇನೆ, ಬೆಂಗಳೂರಿನ ಖೇಣಿ, ಬೆಳಗಾಂನ ಗಣಿ ಇವೆರಡೇ ವಿಷಯ ಬೇರೆ ಏನೂ ಇಲ್ಲವೇ ಇಲ್ಲ. ಏತಕ್ಕಾಗಿ ಈ ಸದನವನ್ನು ನಡೆಸುತ್ತಿದ್ದೀರಿ. ನಾನು ಮಾನ್ಯ ಯಡಿಯೂರಪ್ಪನವರು ಮಾಡುತ್ತಿರುವಂಥ ಕೆಲಸಕ್ಕೆ ನಿಮಗೆಲ್ಲ ಹೊಟ್ಟೆ ಉರಿ, ಅದಕ್ಕೆ ತಣ್ಣೀರು ಬಟ್ಟೆಯನ್ನು ಹಾಕಿಕೊಳ್ಳಿ, ಏನು ಮಾಡುವುದಕ್ಕಾಗುವುದಿಲ್ಲ. ನಾನು ಹೇಳುವುದು ಇಷ್ಟೆ..

ಶ್ರೀ ಹೆಚ್.ಸಿ. ಬಾಲಕೃಷ್ಣ :- ಯಡಿಯೂರಪ್ಪನವರು ಮಂತ್ರಿ ಮಾಡಲೆಂದು ಈ ರೀತಿ ಮಾತನಾಡುತ್ತಿದ್ದಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :- ಕೆ.ಆರ್. ಆಸ್ಪತ್ರೆಯಲ್ಲಿ ದಾದಿಯರಿಗೆ ಗಾಜಿನಲ್ಲಿ ಚುಚ್ಚಿದ್ದಾರೆ, ಕಿವಿ cut ಮಾಡಿದ್ದಾರೆ, ವೈದ್ಯರುಗಳಿಗೆ ಹೊಡೆದಿದ್ದಾರೆ. ಕೆ.ಆರ್.ಆಸ್ಪತ್ರೆಯಲ್ಲಿ ಇಂತಹ ದುಷ್ಕೃತ್ಯಗಳು ಮತ್ತು ಅನ್ಯಾಯಗಳು ನಡೆಯುತ್ತಿರುವ ಸರಿಯಲ್ಲ. ಮಲಮೂತ್ರಗಳನ್ನು ತೊಳೆಯುತ್ತಿರುವ ಹಾಗೂ ನಮ್ಮ ಸೇವೆ ಮಾಡುತ್ತಿರುವ ದಾದಿಯರಿಗೆ ಮತ್ತು ವೈದ್ಯರಿಗೆ ನಾವು ಒಂದಿಷ್ಟು ನೆರವನ್ನು ಕೊಡದೇ ಹೋದರೆ ತಪ್ಪಾಗುತ್ತದೆ. ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಾಗುತ್ತಿರುವ ದುರಂತಗಳ ಬಗ್ಗೆ ಗಮನ ಹರಿಸಬೇಕು. ನಮ್ಮ ಯಡಿಯೂರಪ್ಪನವರು ಕಷ್ಟಸುಖವನ್ನು ಅನುಭವಿಸಿದಂತಹವರು, ಅವರಿಗೂ ಗೊತ್ತಿದೆ, ಅವರು ಹೆಡೆ ಎತ್ತಿ ನಿಂತುಕೊಳ್ಳಬೇಕು, ಅನ್ಯಾಯ ಅನೀತಿಗಳ ಬಗ್ಗೆ ರಾಜಿ ಮಾಡಿಕೊಳ್ಳಬಾರದು, ಧೈರ್ಯವಾಗಿ ಮುನ್ನುಗ್ಗಿ ನಾವಿದ್ದೇವೆ, ಪ್ರಾಣ ಕೊಡುತ್ತೇವೆ. ಆಸ್ಪತ್ರೆಯಲ್ಲಾಗುತ್ತಿರುವ ದೌರ್ಜನ್ಯವನ್ನು ತಪ್ಪಿಸಬೇಕು. ಯಾವುದೇ ಆಸ್ಪತ್ರೆಯಾಗಲಿ ವೈದ್ಯರು ಕೇವಲ ಸಹಿ ಹಾಕಿ ಖಾಸಗಿ ನರ್ಸಿಂಗ್ ಹೋಮ್‌ನಲ್ಲಿ ದಾದಿಯರು ಕೆಲಸ ಮಾಡುತ್ತಿರುತ್ತಾರೆ, ಇದು ಸರಿಯೇ?

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅಧ್ಯಕ್ಷರೆ, ಯಾರಿಗೆ ದೌರ್ಜನ್ಯವಾಗಿದೆ ಎಂದು ಹೇಳುತ್ತಿದ್ದಾರೊ ಗೊತ್ತಾಗುತ್ತಿಲ್ಲ, ಅವರು ಬಡವರ ದೌರ್ಜನ್ಯವಾದ ಮೇಲೆ ವೈದ್ಯರನ್ನು ಸರಿಮಾಡಿ ಎಂದು ಅವರು ಹೇಳುತ್ತಿರುವುದು.

ಶ್ರೀ ಹೆಚ್.ಎಸ್. ಶಂಕರಲಿಂಗೇ ಗೌಡ :- ಆಸ್ಪತ್ರೆಯಲ್ಲಿ ಗುಣಮಟ್ಟ ಸರಿಯಿಲ್ಲ, ಆಸ್ಪತ್ರೆಯಲ್ಲಿ ನೆಮ್ಮದಿಯಾದಂಥ ವಾತಾವರಣವಿಲ್ಲ, ವೈದ್ಯರಿಗೆ ಹೊಡೆಯುವುದು, ದಾದಿಯರಿಗೆ ಚುಚ್ಚುವುದು ಇಂಥ ಕೃತ್ಯಗಳೆಲ್ಲಾ ನಡೆಯುತ್ತಿವೆ

ಇದನ್ನು ತಕ್ಷಣ ಬಗೆಹರಿಸಬೇಕು. ಸದನದಲ್ಲೂ ಕೇಳುವುದಕ್ಕೂ ಸಾಧ್ಯವಾಗುತ್ತಿಲ್ಲ, ಅಲ್ಲಿ ಖೇಣಿ ಇಲ್ಲಿ ಗಣಿ ಇದೇನೀದು ಸದನವೇ? ದಯವಿಟ್ಟು ಯಡಿಯೂರಪ್ಪನವರು ಅಧಿಕಾರದಲ್ಲಿರುವಾಗ ನಾವೆಲ್ಲರು ಉತ್ತೇಜನವನ್ನು ಕೊಟ್ಟು, ಒಟ್ಟಾಗಿ ಈ ಸರ್ಕಾರವನ್ನು ಸುಭದ್ರವಾಗಿ ನಡೆಸೋಣ, ನಮಸ್ಕಾರ.

ಡಾ॥ ಹೆಚ್.ಸಿ. ಮಹದೇವಪ್ಪ [ಟಿ ನರಸೀಪುರ] :- ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ವಿಧೇಯಕ,2009 ಅನ್ನು ನಾನು ಸ್ವಾಗತಿಸುತ್ತಾ, ನನ್ನ ಕೆಲವೊಂದು ಅನಿಸಿಕೆಗಳನ್ನು ಹೇಳಬಯಸುತ್ತೇನೆ. ಈ ಕಾಯಿದೆ ವೈದ್ಯರನ್ನು ರಕ್ಷಿಸುವುದಕ್ಕೆ ಮತ್ತು ಜನರನ್ನು ಶಿಕ್ಷಿಸುವ ಉದ್ದೇಶದಿಂದ ತಂದಿರುವ ಕಾಯಿದೆಯಲ್ಲ. ವೈದ್ಯರಿಗೆ ರಕ್ಷಣೆಯನ್ನು ಕೊಡುವುದು ಮತ್ತು ವೈದ್ಯಕೀಯ ಸಂಸ್ಥೆಗಳ ಆಸ್ತಿಗಳಿಗೆ ಹಾನಿಯಾಗುವುದನ್ನು ತಡೆಗಟ್ಟುವುದು. ಇದು ಯಾವಾಗ ಆಗುತ್ತದೆ? ವರ್ಷದ 365 ದಿವಸಗಳು ಈ ರೀತಿಯ ಗಲಾಟೆ ನಡೆಯುವುದಿಲ್ಲ. Distress condition, distress situation, distress management ಬರುತ್ತದೆ, ಆವಾಗ ಏಕಾಏಕಿ, ಭಾವನಾತ್ಮಕವಾಗಿ ಒಂದು ಆಕ್ಸಿಡೆಂಟ್ ಆಯಿತೊ, ಗಲಾಟೆಯಾಯಿತೋ, ತಲೆಗೆ ಪೆಟ್ಟು ಬಿದ್ದಾಗ, ಊರಿನ ಜನರೆಲ್ಲಾ ಆಸ್ಪತ್ರೆಯ ಕಡೆಗೆ ನುಗ್ಗಿ ಬಿಡುತ್ತಾರೆ. ವೈದ್ಯರ ಹತ್ತಿರ ಹೋಗಿ ಅವರನ್ನು ಕರೆ ಇವರನ್ನು ಕರೆ, ಏನು ಮಾಡುತ್ತಿದ್ದಾರೆ, ಇವರಿಗೆ ಟ್ರೀಟ್‌ಮೆಂಟ್ ಕೊಡಿ ಎಂದು ಇವರೆ ಟ್ರೀಟ್‌ಮೆಂಟ್ ಕೇಳುವುದಕ್ಕೆ ಶುರು ಮಾಡಿಬಿಡುತ್ತಾರೆ. ಆಗ ವೈದ್ಯರಿಗೆ, ಅವರ ಸಿಬ್ಬಂದಿಗಳಿಗೆ ಏನು ಮಾಡಬೇಕು ಏನು ಮಾಡಬಾರದೆಂಬುದು ಗೊತ್ತಾಗದೆ ಗೊಂದಲದಲ್ಲಿರುತ್ತಾರೆ. ಅದೇ ರೀತಿಯಲ್ಲಿ ಈ ಒಂದು ಗಲಾಟೆಯನ್ನು ಬಳಸಿಕೊಂಡು ಕೆಲವು ಜನ anti social elements ಇಂಥ ಪರಿಸ್ಥಿತಿಯನ್ನು ಬಳಸಿಕೊಂಡು ಅಥವಾ ಮುಗ್ಧ ಜನರನ್ನು ಬಳಸಿಕೊಂಡು ಆಸ್ಪತ್ರೆಯ ಆಸ್ತಿಯಾದ ಲ್ಯಾಬೊರೇಟರಿ ಇರಬಹುದು, ಗ್ಲಾಸ್ ಇರಹುದು, ಟೇಬಲ್ ಇರಬಹುದು, ಇನ್ವೆಸ್ಟಿಗೇಷನ್ ಇನ್‌ಸ್ಟ್ರುಮೆಂಟ್ ಇರಬಹುದು, ಅದಕ್ಕೆಲ್ಲಾ ಡ್ಯಾಮೇಜ್ ಮಾಡುತಕ್ಕಂತ, ಮ್ಯಾನ್‌ಹ್ಯಾಂಡಲ್ ಮಾಡತಕ್ಕಂಥ ಸನ್ನಿವೇಶಗಳು ಕೆಲವೇ ಸಮಯದಲ್ಲಿ ನಡೆಯುವ ಉದಾಹರಣೆಗಳಿದ್ದಾವೆ. ಇಡೀ ರಾಜ್ಯದ ಉದ್ದಗಲಕ್ಕೂ ಇಂಥಹ ಗಲಾಟೆಯಾಗುವುದಿಲ್ಲ. ನಾನು ಆರೋಗ್ಯ ಮಂತ್ರಿಯಾಗಿದ್ದರೂ ಕೂಡ ಇಂಥ ಒಂದು ಕಾಯಿದೆಯ ಅನಿವಾರ್ಯತೆ ಇತ್ತು. ಉದಾಹರಣೆಗೆ ಮೊನ್ನೆ ಪೋಲಿಯೊ ಡ್ರಾಪ್ಸ್

ಹಾಕಿದರು. ಪ್ರಪಂಚದ ಇತಿಹಾಸದಲ್ಲಿ ಪೋಲಿಯೊ ಡ್ರಾಪ್ಸ್ ನಿಂದ ಯಾವುದೇ ಮಗು ಸಾಯುವುದಿಲ್ಲ. ಡಿಹೆಚ್ಓ ಆಗಿದ್ದ ನಮ್ಮ ವೈದ್ಯರಾದ, ನಮ್ಮ ಬಗಲಿಯವರಿದ್ದಾರೆ, ಪ್ರೊಫೆಸರ್ ಆಗಿದ್ದ ಡಾ॥ ಮಲಕಾರೆಡ್ಡಿಯವರಿದ್ದಾರೆ, ಯಾವುದೇ ಮಗು ಪೋಲಿಯೊ ಡ್ರಾಪ್‌ನಿಂದ ಸಾಯುವುದಿಲ್ಲ. ತಮಿಳುನಾಡಿನಲ್ಲಿ ಯಾವುದೋ ಎನ್‌ಸೆಫಲೈಟಿಸ್ ಇದ್ದ ಮಗುವಿಗೆ ಪೋಲಿಯೊ ಡ್ರಾಪ್ ಹಾಕಿದ್ದರು, baby died because of encephalitis. ಇದರಿಂದ ಪೋಲಿಯೊ ಹಾಕಿದ ಒಂದು ಊರಿನಲ್ಲಿದ್ದ 5 ಸಾವಿರ, 8 ಸಾವಿರ ಎಷ್ಟು ಜನರಿದ್ದರೋ ಅಷ್ಟು ಜನರೆಲ್ಲಾ ಆಸ್ಪತ್ರೆಗೆ ನುಗ್ಗಿ ಬಿಟ್ಟರು. ನೈಟ್ ಡ್ಯೂಟಿನಲ್ಲಿ ಒಂದು PHCನಲ್ಲಿ ಒಬ್ಬರೇ ವೈದ್ಯ ಇರುತ್ತಾರೆ, ಅಥವಾ ಒಂದು ತಾಲ್ಲೂಕಿಗೆ ಒಬ್ಬರೋ, ಅಥವಾ ಇಬ್ಬರು ವೈದ್ಯರಿರುತ್ತಾರೆ. ಎಲ್ಲಾ 20 ಸಾವಿರ ಜನರು ಹೋಗಿ ಆಸ್ಪತ್ರೆಗಳನ್ನು ಧ್ವಂಸ ಮಾಡಿ, ಆ ವೈದ್ಯರನ್ನು ಹಿಡಿದುಕೊಂಡು ಎಳೆದಾಡಿದರೆ ಟ್ರೀಟ್‌ಮೆಂಟ್ ಕೊಡುವುದು ಹೇಗೆ? ಆ ಒಂದು ಪೋಲಿಯೊ ಡ್ರಾಪ್ ಹಾಕಿದ ಯಾವ ಮಗುವಿಗೂ ಏನೂ ಆಗುವುದಿಲ್ಲ. ಪೋಲಿಯೊ ಡ್ರಾಪ್ ಹಾಕಿ ಸತ್ತಂಥ ಉದಾಹರಣೆ ಇಲ್ಲ. Only antigen, antibiotic ಉತ್ಪಾದನೆ ಮಾಡತಕ್ಕಂಥಹ, ಒಂದು ಸಾಮರ್ಥ್ಯ ಇರುವಂಥ ಒಂದು ಡ್ರಾಪ್ ಅದು. ಇದಕ್ಕೆ ಇಲ್ಲಿರುವ ಮಾನ್ಯ ಜನಪ್ರತಿ ನಿಧಿಗಳಿರುವ ಸಭೆ ಏನಿದೆ ಜನ ವಿರೋಧಿಯಾಗಿದೆ, ವೈದ್ಯರ ಪರವಾಗಿದೆ ಎಂಬ ಭಾವನೆಯನ್ನು ಇಟ್ಟುಕೊಳ್ಳಬಾರದು. During a distress situation ವೈದ್ಯರಲ್ಲಿ ಯಾರ್‍ಯಾರು, ಕರ್ತವ್ಯಲೋಪ ಮಾಡಿದ್ದಾರೆ ಅಥವಾ ಕರ್ತವ್ಯದಿಂದ ನುಣುಚಿಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೆ ಅಂಥವರಿಗೆ ಕಾನೂನಿನಲ್ಲಿ ತನಿಖೆ ಮುಖಾಂತರ ಶಿಕ್ಷೆಯಾಗಿಯೇ ಆಗುತ್ತದೆ. ಅವರ ತಪ್ಪು ಟ್ರೀಟ್‌ಮೆಂಟ್ ನಿಂದ, ಅವರ ನಿರ್ಲಕ್ಷ್ಯದಿಂದ, ಕರ್ತವ್ಯಲೋಪದಿಂದ ಸರಿಯಾದ ಔಷಧೋಪಚಾರವನ್ನು ಕೊಡದೆ ಇದ್ದರೆ ತನಿಖೆ ಮಾಡಿ ಅವರಿಗೆ ಶಿಕ್ಷೆ ಆಗಿಯೇ ಆಗುತ್ತದೆ, ಅದರಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಈಗ ಫ್ಯಾಮಿಲಿ ಪ್ಲಾನಿಂಗ್ ವಿಷಯದಲ್ಲಿ, ತಾನು ಮಾಡಬೇಕಾದ ಸರ್ಜರಿಯನ್ನು ಸರಿಯಾಗಿ ಮಾಡದೆ ಅವನು ಕರ್ತವ್ಯಲೋಪವೆಸಗಿದರೆ ಖಂಡಿತವಾಗಿಯೂ ಅವನು ಅಮಾನತ್ತಾಗಿಯೇ ಆಗುತ್ತಾನೆ. ಪನಿಶ್‌ಮೆಂಟ್ ಆಗಿಯೇ ಆಗುತ್ತದೆ. ಈಗ ತಂದಿರುವ ಕಾಯಿದೆ ಆಸ್ಪತ್ರೆಯ ಆಸ್ತಿಯನ್ನು ರಕ್ಷಣೆ ಮಾಡುವುದಾಗಿದೆ, ಮತ್ತು distress condition ನಲ್ಲಿ ಜನ ಸಮುದಾಯ ವೈದ್ಯರು ಮತ್ತು ಅವರ ಸಿಬ್ಬಂದಿಗಳ ಮೇಲಿ ಆಕ್ರಮಣ ಮಾಡುವ ಮತು ಆಸ್ತಿಗಳನ್ನು ನಷ್ಟ ಮಾಡುವಂಥ ವಿಷಯಕ್ಕೆ ಸಂಬಂಧಪಟ್ಟಿರುವುದರಿಂದ ಇದರಲ್ಲಿ

ಯಾರೂ ಆತಂಕಪಡಬೇಕಾಗಿಲ್ಲ. ಇದು ವೈದ್ಯರ ಪರವಾಗಿಯೂ ಇಲ್ಲ, ಜನರ ವಿರೋಧಿಯಾಗಿಯೂ ಇಲ್ಲ, ಆದುದರಿಂದ ಇದನ್ನು ಎಲ್ಲರೂ ಸ್ವಾಗತ ಮಾಡೋಣ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ [ಚಿಕ್ಕೋಡಿ ಸದಲಗಾ] :- ಮಾನ್ಯ ಅಧ್ಯಕ್ಷರೆ, ಇವತ್ತು ಈ ಕಾನೂನನ್ನೇನು ತಂದಿದ್ದಾರೆ, ಈ ಕಾನೂನನ್ನು ತರಬೇಕಾದರೆ ಮೊದಲನೆಯದಾಗಿ ಆಸ್ಪತ್ರೆ ಗಳಲ್ಲಿ ವೈದ್ಯರು ಮತ್ತು ನರ್ಸ್‌ಗಳು ಇದ್ದಾರೋ ಇಲ್ಲವೋ ಮತ್ತು ಆಸ್ಪತ್ರೆಯ ಪರಿಸ್ಥಿತಿ ಹೇಗಿದೆ ಎಂಬುದನ್ನು ನೋಡಬೇಕು. ಇವತ್ತು ಏನಾಗಿದೆ ಎಂದರೆ, ಯಾವುದೇ ಸರ್ಕಾರಿ ಆಸ್ಪತ್ರೆಗಳಲ್ಲಿ ಇವತ್ತು ವೈದ್ಯರು ಇಲ್ಲ, ನರ್ಸ್‌ಗಳು ಇಲ್ಲ, ಔಷಧಿಗಳೂ ಇಲ್ಲ. ಇವತ್ತು ರೋಗಿಗಳ ಕಡೆಗೂ ಲಕ್ಷ್ಯ ಕೊಡಬೇಕು, ಈ ವೈದ್ಯರುಗಳ ಕಡೆಗೆ ಲಕ್ಷ್ಯವನ್ನು ಕೊಟ್ಟರೆ ಇದು ಸರಿ ಹೋಗುತ್ತದೆಂಬುದು ನನ್ನ ವಿಚಾರವಾಗಿದೆ. ಏಕೆಂದರೆ, ಒಂದು ಆಕ್ಸಿಡೆಂಟ್ ಆದರೆ ಅಥವಾ ರೋಗಿಗೆ ಹಾರ್ಟ್ ಅಟ್ಯಾಕ್ ಆದರೆ, ಅವರು ಆಸ್ಪತ್ರೆಗೆ ಹೋದಾಗ ರೋಗಿಯ ಸಂಬಂಧಿಕರು ಅವರ ಜೊತೆಯಲ್ಲಿರುತ್ತಾರೆ, ಅವರ ತಲೆಯಲ್ಲಿ ಏನಿರುತ್ತದೆ ಎಂದರೆ, ಟ್ರೀಟ್‌ಮೆಂಟ್ ಬೇಗ ಸಿಗಬೇಕು. ನಮಗೆ ಬೇಗನೆ ಉಪಚಾರವಾಗಬೇಕೆಂದು ಅವರು ಅಲ್ಲಿಗೆ ಹೋಗಿರುತ್ತಾರೆ. ಆದರೆ ಅವರು ಅಲ್ಲಿ ಹೋದಾಗ ಅಲ್ಲಿ ಎಕ್ಸರೇ ಮೆಷಿನ್ ಇರುವುದಿಲ್ಲ, ಒಳಗಡೆ ಸಾಕಷ್ಟು ವ್ಯವಸ್ಥೆ ಇರುವುದಿಲ್ಲ, ಅಂಥ ವೇಳೆಯಲ್ಲಿ ವೈದ್ಯರು ಏನು ಮಾಡುವುದಕ್ಕಾಗುವುದಿಲ್ಲ. ಆಮೇಲೆ ವೈದ್ಯರು ಬೇರೆ ಕಡೆಗೆ ಕರೆದುಕೊಂಡು ಹೋಗಿ ಎಂದು ಹೇಳುತ್ತಾರೆ. ಇವತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಬಸವರಾಜ ಬೊಮ್ಮಾಯಿ ಅವರನ್ನು ಜೂನ್ ತಿಂಗಳಿನಲ್ಲಿ ಒಂದು ಕೆಡಿಪಿ ಸಭೆ ಮಾಡಿದಾಗ, ಬೆಳಗಾಂ ಜಿಲ್ಲಾ ಆಸ್ಪತ್ರೆಯ ಪರಿಸ್ಥಿತಿ ಹೇಗಿದೆ ಹೋಗಿ ನೋಡಿ ಬನ್ನಿ ಎಂದು ಹೇಳಿದೆ.

ಬೆಳಗಾವಿ ಸಿವಿಲ್ ಆಸ್ಪತ್ರೆಗೂ ಹೋಗಿ ಭೇಟಿ ಕೊಡಿ. ಅಲ್ಲಿ ಪರಿಸ್ಥಿತಿ ಏನು ಇದೆ ನೋಡಿ ಎಂದು ಹೇಳಿದೆ ಪ್ರತಿಯೊಂದು ರೂಮ್ ಕೂಡ ಸೋರುತ್ತಿದೆ. ಪ್ರತಿಯೊಂದು ರೂಮಿನಲ್ಲಿ ಮಳೆ ಹನಿ ಒಳಗಡೆ ಬರುತ್ತಿದ್ದವು, ಮೇಲಿನಿಂದ ಕೂಡ ನೀರು ಸೋರುತ್ತಿದೆ. ಅವರ ಕಡೆ ಸಾಕಷ್ಟು ದುಡ್ಡು ಇತ್ತು, ಆದರೆ ಆ ದುಡ್ಡನ್ನು ಖರ್ಚು ಮಾಡುವುದಕ್ಕೆ ಅವಕಾಶ ಕೊಟ್ಟಿರಲಿಲ್ಲ. ಆಸ್ಪತ್ರೆಗಳ ಪರಿಸ್ಥಿತಿ ಇವತ್ತು ಇಷ್ಟು ಕೆಟ್ಟ ಪರಿಸ್ಥಿತಿ ಇದೆ ಆ ರೋಗಿಗಳು ತಂಡಿ ಒಳಗೆ ರಗ್ಗು ಹೊದ್ದುಕೊಂಡು ಹಾಗೆಯೇ ಮಲಗಿದ್ದರು. ಮಾನ್ಯ ಬೊಮ್ಮಾಯಿ ಸಾಹೇಬರು ನೋಡಿ ಡಾಕ್ಟರ್ ಎಲ್ಲರನ್ನು ಕರೆದು ಒಮ್ಮೆ ಮೀಟಿಂಗ್ ಮಾಡಿ ಕೂಡಲೇ ಹಣ ಬಿಡುಗಡೆ ಮಾಡುವ ವ್ಯವಸ್ಥೆ ಮಾಡಿದರು. ಇವತ್ತು ನಮ್ಮ ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ ಸ್ವಲ್ಪ ಆಸ್ಪತ್ರೆ ತರಹ ಕಾಣುತ್ತಿದೆ.

ಚಿಕ್ಕೋಡಿಯಲ್ಲಿ 50 ಬೆಡ್ ಆಸ್ಪತ್ರೆ ಇದೆ, ಡಾಕ್ಟರ್ಸ್ ಮೂರು ಜನ ಇದ್ದಾರೆ. ಅಲ್ಲಿ ನರ್ಸ್‌ಗಳೂ ಇಲ್ಲ ಪೇಶೆಂಟ್ಸ್ ಮಾತ್ರ ಸುಮಾರು ತಾಲ್ಲೂಕುಗಳಿಂದ ಬರುತ್ತಾರೆ. ಸರಿಯಾದ ಆಂಬುಲೆನ್ಸ್ ವ್ಯವಸ್ಥೆ ಇಲ್ಲ.ಆಂಬುಲೆನ್ಸ್ ತೆಗೆದುಕೊಂಡು ಬೆಳಗಾಂನ ಕೆ.ಎಲ್.ಇ. ಗೆ ಬರಬೇಕಾದರೆ ಆಂಬುಲೆನ್ಸ್‌ಗೆ ಡೀಸಲ್ ಇಲ್ಲವೆಂದು ಡ್ರೈವರ್ ಹೇಳುತ್ತಾನೆ. ಡೀಸಲ್ ಹಾಕಿಸುವುದಕ್ಕೆ ದುಡ್ಡು ಕೊಟ್ಟಿಲ್ಲವೆಂದು ಸಾಕಷ್ಟು ತೊಂದರೆಗಳನ್ನು ಹಳ್ಳಿ ಮಟ್ಟದಲ್ಲಿ ನೋಡುತ್ತಿದ್ದೇವೆ. ದಯವಿಟ್ಟು ನೀವು ಈ ತರಹ ಶಿಕ್ಷೆಯನ್ನು ವಿಧಿಸಿದರೆ ಜನ ಏನು ಮಾಡುತ್ತಾರೆ? ಅಂಜಿ ಮತ್ತೆ ಖಾಸಗಿ ಆಸ್ಪತ್ರೆಗಳಿಗೆ ಹೋಗುವ ವ್ಯವಸ್ಥೆ ಆಗುತ್ತದೆ. ಊರುಗಳಲ್ಲಿ ಖಾಸಗಿ ಆಸ್ಪತ್ರೆಗಳೆಂದರೆ RMP ಗಳು ಏನು ದವಾಖಾನೆಗಳನ್ನು ನಡೆಸುತ್ತಾರೆ ಅಲ್ಲಿ ತಮ್ಮ ಔಷಧಿಗಳನ್ನು ತೆಗೆದುಕೊಳ್ಳುವುದಕ್ಕೆ ಅಥವಾ ತಮ್ಮ ಉಪಚಾರಗಳನ್ನು ಮಾಡಿಸಿಕೊಳ್ಳುವುದಕ್ಕೆ ಅಲ್ಲಿಗೆ ಹೋಗುತ್ತಾರೆ. ಇದರಿಂದ ಸರ್ಕಾರಿ ಆಸ್ಪತ್ರೆಗಳ ಮೇಲೆ ಕೆಟ್ಟ ಪರಿಣಾಮ ಆಗುವ ಸಂಭವ ಇದೆ. ದಯವಿಟ್ಟು ಮೂರು ವಿಷಯಗಳನ್ನು ಸಚಿವರು ಗ ಮನದಲ್ಲಿಟ್ಟುಕೊಳ್ಳಬೇಕು. ಡಾಕ್ಟರ್‌ಗಳು ಒಳ್ಳೆಯ ಉಪಚಾರ ಕೊಡುವುದಕ್ಕೆ ಬೇಕಾದಂತಹ ಎಲ್ಲಾ ವ್ಯವಸ್ಥೆಗಳನ್ನು ಮಾಡಬೇಕು. ರೋಗಿಗಳನ್ನು ಸರಿಯಾಗಿ ನೋಡಿಕೊಳ್ಳುವಂತಹ ಡಾಕ್ಟರ್‌ಗಳನ್ನು ಹಾಕಬೇಕು. ಎರಡೂ ಕಡೆ ಏನಾಯಿತು ಎಂದು ನೋಡುವುದಕ್ಕೆ ಪ್ರತಿಯೊಂದು ಆಸ್ಪತ್ರೆಯಲ್ಲಿ ಕ್ಯಾಮೆರಾ ಇಡಿ. ಆ ರೋಗಿಗಳಿಗೆ ಡಾಕ್ಟರ್‌ಗಳು ಸರಿಯಾಗಿ ನೋಡಿದ್ದಾರೋ, ಇಲ್ಲವೋ ಎಂಬುದು ಗೊತ್ತಾಗುತ್ತದೆ. ಇಲ್ಲ, ನಮ್ಮ ಕೆ.ಎಲ್.ಇ ಆಸ್ಪತ್ರೆಯಲ್ಲಿ ಪ್ರತಿಯೊಂದು ರೂಮಿನಲ್ಲಿ ಕ್ಯಾಮರಾಗಳನ್ನು ಇಟ್ಟಿದ್ದಾರೆ. ಆಸ್ಪತ್ರೆಯಲ್ಲಿ ರೋಗಿ ಎಷ್ಟು ಗಂಟೆಗೆ ಒಳಗೆ ಬಂದ, ಅವನಿಗೆ ಏನೇನು ಟ್ರೀಟ್‌ಮೆಂಟ್ ಸಿಕ್ಕಿತು ಎಂದು ಗೊತ್ತಾಗುತ್ತದೆ. ಆ ತರಹ ನೀವು ವ್ಯವಸ್ಥಿತವಾಗಿ ಮಾಡಿದರೆ . . . . .

ಶ್ರೀ ಆರ್. ಅಶೋಕ್ :- ಬಿಲ್ ಬಗ್ಗೆ ಸ್ಪೆಸಿಫಿಕ್ ಆಗಿ ಸಲಹೆ ಕೊಡುವುದು ಇದ್ದರೆ ಕೊಡಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ನಾನು ಸ್ಪೆಸಿಫಿಕ್ಕಾಗಿ ಸಲಹೆ ಕೊಡುತ್ತಿದ್ದೇನೆ. ನಮಗೆ ಮೊದಲೇ ಹೆಚ್ಚು ಮಾತನಾಡುವುದಕ್ಕೆ ಬರುವುದಿಲ್ಲ. ನಾವು ಅರ್ಧ ಕನ್ನಡ ಅರ್ಧ ಮರಾ ಮಾತನಾಡುತ್ತೇವೆ. ವಿಷಯಾಂತರ ಮಾಡಿ ನಮಗೂ ಹೇಳುವುದಕ್ಕೆ ಬರುವುದಿಲ್ಲ. ಏನಿದೆ ಅದನ್ನು ನಾವು ಪ್ರಾಮಾಣಿಕವಾಗಿ ಹೇಳುತ್ತೇವೆ. ದಯವಿಟ್ಟು ತಾವು ಕೇಳಬೇಕು. ನಾವು ಒಂದು 50 ಪೇಜ್ ಓದಿ ಬಂದು ಗಂಟೆಗಟ್ಟಲೆ

ಮಾತನಾಡುವುದಿಲ್ಲ. ಹಳ್ಳಿಗಳಲ್ಲಿ ಆಸ್ಪತ್ರೆಗಳ ಪರಿಸ್ಥಿತಿ ಏನಿದೆ ಅದು ತಮ್ಮ ಮುಂದೆ ಇಡುತ್ತೇವೆ. ಆಸ್ಪತ್ರೆಗಳ ಪರಿಸ್ಥಿತಿ ಇವತ್ತು ಏನಿದೆ ಎಂದು ತಾವು ಬಂದು ನೋಡಿ. ನಮ್ಮ ಆರೋಗ್ಯ ಸಚಿವರು ಆಸ್ಪತ್ರೆಗಳಿಗೆ ಭೇಟಿ ನೀಡಿ ಅಲ್ಲಿ ಏನೇನು ಪರಿಸ್ಥಿತಿ ಇದೆ ಅದನ್ನು ನೋಡಿ ಆ ಮೇಲೆ ಕಾನೂನು ತೆಗೆದುಕೊಂಡು ಬನ್ನಿ."

ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) :- ಮಾನ್ಯ ಅಧ್ಯಕ್ಷರೆ, ಈ ವಿಧೇಯಕ ಏನು ಮಂಡನೆ ಆಗಿದೆ, ಇದು ಬಹುತೇಕ ಖಾಸಗಿ ನರ್ಸಿಂಗ್ ಹೋಂಗಳಿಗೆ ರಕ್ಷಣೆ ಕೊಡುವುದಕ್ಕಾಗಿ ಆಗಿದೆ ಎಂದು ನಾನು ಭಾವಿಸುತ್ತೇನೆ. IPC 353 ಸೆಕ್ಷನ್‌ನಲ್ಲಿ ಯಾವುದೇ ಸರ್ಕಾರಿ ನೌಕರ ಮಾಡುತ್ತಿರುವಂತಹ ಕೆಲಸಕ್ಕೆ ಅಡ್ಡಿಪಡಿಸಿದರೆ ಅಲ್ಲಿ ಶಿಕ್ಷೆ ಇದೆ. ಇಲ್ಲಿ ವೈದ್ಯರು ಸರ್ಕಾರಿ ನೌಕರರೇ ಅವರು. ಅವರಿಗೆ ಈಗಾಗಲೇ ಕೇಂದ್ರ ಸರ್ಕಾರ ಇರಬಹುದು, ರಾಜ್ಯ ಸರ್ಕಾರ ಇರಬಹುದು ಸರ್ಕಾರಿ ನೌಕರರು ಯಾರಿದ್ದಾರೆ ಅವರ ನೌಕರಿಗೆ ಯಾರಾದರೂ ಅಡೆತಡೆ ಮಾಡಿದರೆ IPC 353 ಸೆಕ್ಷನ್ ಅಪ್ಲೈ ಆಗುತ್ತದೆ. ಈ ವಿಧೇಯಕ ಖಾಸಗಿ ನರ್ಸಿಂಗ್ ಹೋಂ ವೈದ್ಯರಿಗೆ ಅಪ್ಲೈ ಆಗುತ್ತದೆ ಎಂದು ನಾನು ಭಾವಿಸಿದ್ದೇನೆ. ಬಹುತೇಕವಾಗಿ ಖಾಸಗಿ ಆಸ್ಪತ್ರೆಗಳಿಗೆ ಹೋಗುವಂತಹ ಜನರು ಏನಿದ್ದಾರೆ ಇವತ್ತು ಸ್ಥಿತಿವಂತರಾಗಿರುತ್ತಾರೆ. ಆದರೆ ಸರ್ಕಾರಿ ಆಸ್ಪತ್ರೆಗಳಿಗೆ ಹೋಗುವವರು ಬಹುತೇಕ ಬಡ ಜನತೆ ಇರುತ್ತಾರೆ. ಇಲ್ಲಿ ಈ ಕಾಯಿದೆ ದುರುಪಯೋಗವಾಗುತ್ತದೆ. ಸರ್ಕಾರಿ ವೈದ್ಯರ ಮೇಲೆ ಯಾರಾದರೂ ಯಾವುದಾದರೂ ಕಾರಣಕ್ಕಾಗಿ ಹಲ್ಲೆ ಮಾಡಿದಂತಹ ಸಂದರ್ಭದಲ್ಲಿ ಈ ವಿಧೇಯಕದ ಜೊತೆಗೆ ಮತ್ತೆ 353 ಸೆಕ್ಷನ್ ಕೂಡ ಅಲ್ಲಿ ಅಪ್ಲೈ ಆಗುವುದರಿಂದ ಒಬ್ಬ ಮನುಷ್ಯನ ಮೇಲೆ ಎರಡು ದಂಡಗಳು ಪ್ರಯೋಗ ಆಗುತ್ತವೆ. ಆದ್ದರಿಂದ ಇದು ಖಾಸಗಿ ವೈದ್ಯರಿಗೆ ರಕ್ಷಣೆ ಕೊಡುವುದಕ್ಕಾಗಿ ಇದೆಯೋ ಅಥವಾ ಸರ್ಕಾರಿ ನೌಕರರಿಗೆ ರಕ್ಷಣೆ ಕೊಡುವುದಕ್ಕೋಸ್ಕರವೂ ಇದೆಯೋ ಎಂದು ಪರಿಶೀಲನೆ ಮಾಡಬೇಕು. ಸರ್ಕಾರಿ ನೌಕರರಿಗೆ ಈಗಾಗಲೇ ರಕ್ಷಣೆ ಇರುವುದರಿಂದ ಈ ವಿಧೇಯಕ ಅಷ್ಟು ಸೂಕ್ತ ಅಲ್ಲವೆಂದು ನಾನು ಬಾವಿಸುತ್ತೇನೆ.

ಶ್ರೀ ಕೆ. ಎಂ. ಕೃಷ್ಣಮೂರ್ತಿ (ಕಡೂರು) :- ಮಾನ್ಯ ಸಭಾಧ್ಯಕ್ಷರೆ, ಇವತ್ತು ಸರ್ಕಾರಿ ವೈದ್ಯರಿಗೆ ರಕ್ಷಣೆಯನ್ನು ಕೊಡುವಂತಹ ವಿಧೇಯಕವನ್ನು ತಾವು ಮಂಡಿಸಿದ್ದೀರಿ ಬಹಳ ಸಂತೋಷ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಬರೀ ವೈದ್ಯರಿಗೆ ರಕ್ಷಣೆ ಕೊಡುವ ವಿಚಾರದಲ್ಲಿ ಮಾತ್ರ ಮಾತನಾಡುತ್ತೇನೆ. ಎಲ್ಲಾ ವೈದ್ಯರೂ ಒಳ್ಳೆಯವರಿಲ್ಲ, ಎಲ್ಲಾ ವೈದ್ಯರೂ ಕೆಟ್ಟವರಿಲ್ಲ.

ಆದರೆ ಈಗ ವೈದ್ಯರಿಗೆ ಹಣದ ಆಸೆ ಜಾಸ್ತಿ ಆಗಿ ಹೋಗಿದೆ. ನಾವು ಹೇಗಾದರೂ ಮಾಡಿ ಹಣವನ್ನು ಮಾಡಬೇಕೆನ್ನುವ ದೃಷ್ಟಿಯಿಂದ ಅವರು ಸರ್ಕಾರಿ ಆಸ್ಪತ್ರೆಗಳಲ್ಲಿಯೂ, ಖಾಸಗಿ ಆಸ್ಪತ್ರೆಗಳಲ್ಲಿಯೂ ಕೆಲಸವನ್ನು ಮಾಡುವಂತಹ ಒಂದು ಪರಿಪಾಠವನ್ನು ಅವರು ಇಟ್ಟುಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ನೀವು ಏನಾದರೂ ಸರ್ಕಾರಿ ಆಸ್ಪತ್ರೆಗಳ ವೈದ್ಯರ ಮೇಲೆ ಇರಬಹುದು, ಖಾಸಗಿ ಆಸ್ಪತ್ರೆಗಳ ವೈದ್ಯರ ಮೇಲೆ ಇರಬಹುದು, ಅವರ ಮೇಲೆ ಏನಾದರೂ ದೌರ್ಜನ್ಯ ನಡೆದಿದೆ ಎಂದು ಅವರು ಏನಾದರೂ ಪೊಲೀಸ್‌ನವರಿಗೆ ದೂರು ಕೊಟ್ಟರೆ ಶಿಕ್ಷೆ ಆಗುತ್ತದೆ ಎನ್ನುವುದಾದರೆ ಸಮಾಜದ ಜೀವನದಲ್ಲಿ ರೋಗಿಗಳಾಗಲಿ, ರೋಗಿಗಳ ಪೋಷಕರಾಗಲಿ ಬಹಳ ಕೆಟ್ಟ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ. ದಯವಿಟ್ಟು ಈ ಕಾಯಿದೆಯನ್ನು ತರುವಂತಹ ಸಂದರ್ಭದಲ್ಲಿ ಸರ್ಕಾರ ಇನ್ನೊಂದು ಸಾರಿ ಪರ್ಯಾಲೋಚಿಸಿ ತರಬೇಕು. ನಾನು ವೈದ್ಯರಿಗೆ ರಕ್ಷಣೆ ಕೊಡಬೇಡಿ ಎಂದು ಹೇಳುವುದಿಲ್ಲ. ಉದಾಹರಣೆಗೆ ಎರಡು ತಿಂಗಳ ಹಿಂದೆ ಒಂದು ಸರ್ಕಾರಿ ಬಸ್ಸಿಗೂ ಜೀಪಿಗೂ ಡಿಕ್ಕಿ ಹೊಡೆದು ಕಡೂರು ಜನರಲ್ ಆಸ್ಪತ್ರೆಯಲ್ಲಿ 16 ಜನ ಪ್ರಯಾಣಿಕರು ತೀರಿಕೊಂಡರು. ಅಂತಹ ಸಂದರ್ಭದಲ್ಲಿ ನಾನೇ ಜನ ಪ್ರತಿನಿಧಿ ಇದ್ದೂ ವೈದ್ಯರಿಗೆ ಹೇಳಿ ಕಳುಹಿಸಿದರೂ ಕೂಡ ಅವರ ಅಸಹಾಯಕತೆ, ಅವರು ತೋರಿಸಿದಂತಹ ನೀತಿಯನ್ನು ನೋಡಿದರೆ, ಈ ಕಾನೂನಿನಿಂದ ನಾಳೆ ಜನ ಪ್ರತಿನಿಧಿಗಳೂ ಅವರ ಮೇಲೆ ಏನೂ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗದೇ ಇರುವಂತಹ ಒಂದು ಪರಿಸ್ಥಿತಿಯನ್ನು ಸರ್ಕಾರವೇ ನಿರ್ಮಾಣ ಮಾಡಿದ ಹಾಗಾಗುತ್ತದೆ. ವೈದ್ಯರ ಮೇಲೆ ದೌರ್ಜನ್ಯ ಮಾಡುವುದು ತಪ್ಪು. ವೈದ್ಯರು ನಡೆದುಕೊಳ್ಳುವಂತಹ ಸಂದರ್ಭದಲ್ಲಿ ಸಾರ್ವಜನಿಕರು ವೈದ್ಯರ ಮೇಲೆ ಬೀಳುತ್ತಾರೆ. ಅದಕ್ಕೆ ಅವರಿಗೆ ಮೂರು ತಿಂಗಳು ಸಜೆ ಆಗುವ ಕಾನೂನು ಜಾರಿಗೆ ತರುವುದು ತಪ್ಪು. ಮಾನ್ಯ ಆರೋಗ್ಯ ಸಚಿವರು ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಒಂದು ಸಾರಿ ಪರ್ಯಾಲೋಚಿಸಬೇಕೆಂದು ಹೇಳಿ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು :- ತಾವು ಮಾತನಾಡಿ. ಮಾನ್ಯ ಸದಸ್ಯರು ಬಿಲ್ ಬಗ್ಗೆ ಮಾತನಾಡಬೇಕೆಂದು ಹೇಳಿದಾಗ ನಾವು ಅವಕಾಶ ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ಸಂಕ್ಷಿಪ್ತವಾಗಿ ಮಾತನಾಡಲಿ. ಬಹಳಷ್ಟು ಜನ ಸದಸ್ಯರು ಈ ಚರ್ಚೆಯಲ್ಲಿ ಪಾರ್ಟಿಸಿಪೇಟ್ ಎಂದು ಹೇಳಿದಾಗ ಇದರಲ್ಲಿ ಅವಕಾಶ ಕೊಡಲಿಲ್ಲವೆಂದರೆ, ಮತ್ತೆ ಎಲ್ಲಿ ಅವಕಾಶ ಕೊಡಬೇಕು? ಸಂಕ್ಷಿಪ್ತವಾಗಿ ತಮ್ಮ ವಿಷಯ ಪ್ರಸ್ತಾಪ ಮಾಡಿ. ಎಲ್ಲರೂ ಅವರನ್ನು ರಿಸ್ಟ್ರಿಕ್ಟ್ ಮಾಡುವುದು ಬೇಡ.

ಶ್ರೀ ವೈ. ಸಂಪಂಗಿ (ಕೆ.ಜಿ.ಎಫ್.) :- ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಎಲ್ಲಾ ಸದಸ್ಯರನ್ನು ನಮಸ್ಕರಿಸುತ್ತಾ ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿದ್ದಂತಹ ಪರಿಣಿತ ವೈದ್ಯರನ್ನು ಸರ್ಕಾರಿ ವೈದ್ಯಕೀಯ ಕಾಲೇಜಿಗೆ ನೇಮಕಾತಿ ಮಾರ್ಪಡಿಸಿರತಕ್ಕಂಥದ್ದು, ಅದೇ ರೀತಿ ಗ್ರಾಮೀಣ ಪ್ರದೇಶಕ್ಕೆ ಪರಿಣಿತ ವೈದ್ಯರೇ ಇಲ್ಲ. ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಪರಿವರ್ತನೆ ಮಾಡುವಂತಹ ಸಂದರ್ಭದಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸತಕ್ಕಂಥದ್ದು ಒಳ್ಳೆಯದು ಎಂದು ನಮ್ಮ ಸರ್ಕಾರಕ್ಕೆ ಮನವಿಯನ್ನು ಕೋರುತ್ತಾ ಈ ವಿಧೇಯಕವನ್ನು ನಾವೆಲ್ಲರೂ ಅನುಮೋದಿಸುತ್ತಾ ಇದ್ದೇವೆ.

ಡಾ॥ ಅಶ್ವತ್ಥ ನಾರಾಯಣ (ಮಲ್ಲೇಶ್ವರಂ) :- ಮಾನ್ಯ ಅಧ್ಯಕ್ಷರೆ, ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿ ಮೇಲೆ ಹಿಂಸಾಚಾರ ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿ ಹಾನಿ ಮಾಡುವುದನ್ನು ನಿಷೇಧಿಸುವ ವಿಧೇಯಕ, ಬಹಳ ಅಗತ್ಯವಾದ ವಿಧೇಯಕ. ಇವತ್ತು ಸಮಾಜದಲ್ಲಿರುವಂತಹ ಪ್ರತಿಯೊಬ್ಬ ವ್ಯಕ್ತಿಗೂ protection ಬೇಕಾಗುತ್ತದೆ. ಸುರಕ್ಷಿತವಾಗಿ ಅವರ ಕೆಲಸವನ್ನು ಮಾಡುವ ವಾತಾವರಣ ನಿರ್ಮಾಣ ಮಾಡುವಂಥದ್ದು ಬಹಳ ಅಗತ್ಯ. ಈ ಒಂದು ದೃಷ್ಟಿ ಇಟ್ಟುಕೊಂಡು ಕಳೆದ ಹಲವಾರು ವರ್ಷಗಳಿಂದ ವೈದ್ಯರ ಮೇಲೆ ಹಿಂಸಾಚಾರ ನಡೆಯುತ್ತಿರುವುದನ್ನು ತಡೆಗಟ್ಟಲಿಕ್ಕೆ ಈ ಕಾನೂನಿನ ತಿದ್ದುಪಡಿ ಆಗಲೇಬೇಕಾಗಿತ್ತು. ವೈದ್ಯರ ಸೇವೆಯಿಂದ ಈ ದೇಶ ಮತ್ತು ರಾಜ್ಯದಲ್ಲಿ ಯಾವ ರೀತಿಯಾದ ಬದಲಾವಣೆ ಕಂಡಿದ್ದೇವೆ, ಜನರ ಆಯಸ್ಸು ಮೊದಲು ಕೇವಲ 40 ವರ್ಷ ದಿಂದ 45 ವರ್ಷಕ್ಕೆ ಸೀಮಿತವಾಗಿತ್ತು. ಇವತ್ತು 65 ವರ್ಷಕ್ಕೆ ಹೆಚ್ಚಾಗಿದೆ. ಇದೆಲ್ಲಾ ಹೇಗಾಯಿತು? ಇವತ್ತು ಇಲ್ಲಿ ಕುಳಿತಿರುವಂತಹ ಪ್ರತಿಯೊಬ್ಬ ಗಣ್ಯ ವ್ಯಕ್ತಿಗಳಾಗಲಿ ಅವರ ಆಯಸ್ಸು ಹೇಗೆ ಹೆಚ್ಚಿಗೆ ಆಯಿತು? ಯಾರ ಸೇವೆಯಿಂದ ಆಯಿತು? ಯಾವ ಜನತೆ ಈ ಸಮಾಜಕ್ಕೆ ಅತ್ಯುನ್ನತವಾದ ಕೊಡುಗೆ ಕೊಟ್ಟಿದ್ದಾರೆ? ಈ ರಾಜ್ಯದಲ್ಲಿ, ಈ ದೇಶದಲ್ಲಿ ವಿದ್ಯಾಭ್ಯಾಸ ಮತ್ತು ಆರೋಗ್ಯ ಎಷ್ಟು ಮುಖ್ಯವೋ ಆ ಒಂದು ಮುಖ್ಯವಾದ ಇಲಾಖೆಗೆ ವೈದ್ಯರಿಗೆ ಸುರಕ್ಷತೆ ಕೊಡುವುದೂ ಬಹಳ ಮುಖ್ಯ. ದೇಶದಲ್ಲಿ ಎಲ್ಲಾ ರಾಜ್ಯಗಳಲ್ಲಿಯೂ ನೀವು ನೋಡಿದಾಗ ಅತಿ ಕಡಿಮೆ ವೆಚ್ಚದಲ್ಲಿ ಜನರಿಗೆ ಚಿಕಿತ್ಸೆ ಸಿಗುತ್ತಿರುವುದು ಕರ್ನಾಟಕ ರಾಜ್ಯದಲ್ಲಿ ಇಡೀ ಪ್ರಪಂಚದಲ್ಲಿ ಯಾವುದೇ ಭಾಗವನ್ನು ನೀವು ತೆಗೆದುಕೊಳ್ಳಿ, ಇವೊತ್ತು ಯು.ಕೆ.ನಲ್ಲಿ ತೆಗೆದುಕೊಳ್ಳಿ ಅಲ್ಲಿರುವಂಥ ಜನತೆಗೆ ಸರ್ಜರಿ ಆಗುವುದಕ್ಕೆ waiting list ನಲ್ಲಿ ಇದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ಯಾವುದೇ waiting list ನಲ್ಲಿ ಇರುವಂಥದ್ದು

ಯಾವುದೂ ಇಲ್ಲ. ಈ ರೀತಿ ಒಂದು ಕನಿಷ್ಟವಾದಂಥ infrastructure ನಲ್ಲಿಯೂ ಕೂಡ ಇವೊತ್ತು ವೈದ್ಯರು ಸೇವೆಯನ್ನು ಮಾಡುತ್ತಿದ್ದಾರೆ. ಇಂಥ ಒಂದು ಉತ್ತಮವಾದಂಥ ಸೇವೆಯನ್ನು ಕೊಡುವಂಥ ಸಮಾಜದಲ್ಲಿ ಗಣ್ಯ ವ್ಯಕ್ತಿಗಳಾದಂಥ ವೈದ್ಯರಿಗೆ ಇವೊತ್ತು ಸುರಕ್ಷತೆಯನ್ನು ಕೇಳುತ್ತಿದ್ದಾರೆ. ಸಮಾಜದಲ್ಲಿ ವೈದ್ಯರುಗಳಿಂದ ಯಾರಿಗೇ ಆಗಲಿ ತೊಂದರೆಯಾದರೆ ಆ ರೀತಿಯಲ್ಲಿ ತೊಂದರೆಯಾದಂಥ ವ್ಯಕ್ತಿಗಳು ವೈದ್ಯರ ವಿರುದ್ಧ ಕೇಸ್ ಹಾಕಲು ಮತ್ತು ಸಂರಕ್ಷಣೆ ನೀಡುವುದಕ್ಕೆ ಕಾನೂನಿದೆ. ಕನ್‌ಸ್ಯೂಮರ್ ಕೋರ್ಟ್ ಇದೆ, ವಿವಿಧ ಫೋರ್ಮ್ಸ್ ನ್ಯಾಯ ಕೇಳುವುದಕ್ಕೆ ಇದೆ. ಕಾನೂನನ್ನು ಕೈಗೆ ತೆಗೆದುಕೊಳ್ಳಬಾರದು, ವೈದ್ಯರಿಗೆ ರಕ್ಷಣೆ ಕೊಡುವಂಥ ದೃಷ್ಟಿಯಲ್ಲಿ ಇವೊತ್ತು ತಂದಿರುವಂಥ ತಿದ್ದುಪಡಿ ನಿಜವಾಗಿಯೂ ಇದು ಸ್ವಾಗತಾರ್ಹವಾಗಿದೆ.

ಅಧ್ಯಕ್ಷರು :- ಓಲೆ ಮಂಜು....

(ಗೊಂದಲ)

ಶ್ರೀ ಎನ್. ಸಂಪಂಗಿ :- ಸಂಪಂಗಿ ಎನ್ನುವವರೂ ಕೂಡ ಇಬ್ಬರು ಇದ್ದಾರೆ. ಹೆಸರಿನ ಜೊತೆಗೆ ಕ್ಷೇತ್ರದ ಹೆಸರನ್ನೂ ಹೇಳಿದರೆ ಒಳ್ಳೆಯದು ಅಧ್ಯಕ್ಷರೆ, ಏಕೆಂದರೆ ಕೇವಲ ಸಂಪಂಗಿ ಎಂದರೆ ನಮ್ಮ ವೈ.ಸಂಪಂಗಿಯವರು ಬಂದುಬಿಡುತ್ತಾರೆ. ಆದುದರಿಂದ ದಯವಿಟ್ಟು ಕ್ಷೇತ್ರದ ಹೆಸರನ್ನು ಹೇಳಿ, ಸದಸ್ಯರ ಹೆಸರನ್ನು ಹೇಳಿ.

ಅಧ್ಯಕ್ಷರು :- ಆಯಿತು, ಆಯಿತು.

ಶ್ರೀ ಎ. ಮಂಜು (ಅರಕಲಗೂಡು) :- ಮಾನ್ಯ ಅಧ್ಯಕ್ಷರೆ, ಈ ವಿಧೇಯಕದ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈಗ ಇವರು ವೈದ್ಯರಿಗೆ ರಕ್ಷಣೆಯನ್ನು ಕೊಡುವುದಕ್ಕೆ ಬಾರಿ ಮುಂದಾಗಿದ್ದಾರೆ, ಈ ರಕ್ಷಣೆಯನ್ನು ಕೊಡುವುದು ಇದರ ಮುಖಾಂತರವಲ್ಲ. ಬೀದಿಯಲ್ಲಿ ವೈದ್ಯರುಗಳು ಬಂದು ತಮಗೆ ಸಂಬಳ ಸಿಗಲಿಲ್ಲವೆಂದು 15 ದಿವಸಗಳ ಕಾಲ ಮೆಜೆಸ್ಟಿಕ್‌ನಲ್ಲಿ, ಕೆ.ಆರ್. ಸರ್ಕಲ್‌ನಲ್ಲಿ ಸ್ಟ್ರೈಕ್ ಮಾಡಿದರು. ಮಾನ್ಯ ಅಶೋಕ್‌ರವರು ಆಗ ಮಧ್ಯೆ ಪ್ರವೇಶಿಸಿ ಅವರಿಗೆ ಸಮಾಧಾನ ಮಾಡಿ ಅವರ ಸಂಬಳವನ್ನು ಜಾಸ್ತಿ ಮಾಡುತ್ತೇವೆಂದು ಹೇಳಿದರು. ಬಹುಶಃ ನಾನು ಈ ಸಂದರ್ಭದಲ್ಲಿ ನಾನು ಅವರಲ್ಲಿ ಮನವಿಯನ್ನ ಮಾಡಿಕೊಳ್ಳುತ್ತಿದ್ದೇನೆ. ವೈದ್ಯರುಗಳಿಗೆ ನಿಜವಾಗಿಯೂ ಕೂಡ ಸಂಬಳ ಕಡಿಮೆ ಆಗಿರುವುದರಿಂದ, ಈಗ ಅವರಿಗೆ ಸಂಬಳವನ್ನು ಹೆಚ್ಚಿಗೆ ಮಾಡಿದರೆ ಅವರು ಹಳ್ಳಿಯಲ್ಲಿ ಇದ್ದು ಸೇವೆ ಮಾಡುವುದಕ್ಕೆ ಸಾಧ್ಯವಿದೆ. ಅವರ ಸಂಬಳವನ್ನು ಹೆಚ್ಚು

ಮಾಡುತ್ತೇವೆಂದು ಘೋಷಣೆಯನ್ನು ಮಾಡಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) :- ಮಾನ್ಯ ಅಧ್ಯಕ್ಷರೆ, ಈಗೇನು ಬಿಲ್ ಮಂಡಿಸಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಡಾಕ್ಟರ್ ಆಗಿದ್ದೇನೆಂದು ಇದನ್ನು ಸ್ವಾಗತ ಮಾಡುತ್ತೇನೆಂದಲ್ಲ. ಯಾವುದೇ ಒಬ್ಬ ಮನುಷ್ಯ ತನ್ನ ವೃತ್ತಿಯನ್ನು ಮಾಡುವಾಗ ಅವನಿಗೆ ಸುರಕ್ಷತೆಯನ್ನು ಕೊಡತಕ್ಕಂಥದ್ದು ಈ ಸಮಾಜದ ಕರ್ತವ್ಯವೆಂದು ನಾನು ಅಂದುಕೊಂಡಿದ್ದೇನೆ. ಅದೇ ರೀತಿ ನೀವು ಇವೊತ್ತು ಈ ಕಾನೂನನ್ನು ತಂದಿದ್ದೀರಿ. ಆದರೆ ಈ ಕಾನೂನಿನಲ್ಲಿ ಕೆಲವೊಂದು ಲೋಪದೋಷಗಳಿವೆ. ಮಂತ್ರಿಗಳು ಈ ಕಡೆ ಸ್ವಲ್ಪ ಗಮನ ಕೊಡಬೇಕೆಂದು ನಾನು ಅವರಲ್ಲಿ ಮನವಿ ಮಾಡುತ್ತೇನೆ. ಈಗ ಮೊದಲನೆಯದಾಗಿ ಈ ಒಂದು ಕಾನೂನಿನಲ್ಲಿ offender, who is an offender? ಎನ್ನತಕ್ಕಂಥದ್ದನ್ನು ನೀವು define ಮಾಡಿದ್ದೀರಿ. ಅದೇನೆಂದರೆ, "offender means any person who either by himself or as a member or as a leader of a group of persons or organization commits or attempts to commit or abets or incites the commission of violence under this Act" ಹೀಗೆ ಹೇಳಿ ಇದನ್ನು ಸೇರಿಸಿದ್ದಾರೆ. ಇದು ಸೂಕ್ತವಲ್ಲ ಎಂದು ನನ್ನ ಅಭಿಪ್ರಾಯ. ಏಕೆಂದರೆ Organization Commits ಎಂದರೆ ಹೇಗೆ? ಯಾವುದಾದರೂ ಮನುಷ್ಯ ಕಮಿಟ್ ಮಾಡಬಹುದೇ ವಿನಾ, organization how it can commit? ಅದಕ್ಕಾಗಿ ಇದು ಪ್ರಸ್ತುತವಲ್ಲ. ಆಮೇಲೆ 'attempts to commit' ಎಂದು ಹೇಳಿದ್ದೀರಿ. ಇದು ಬಹಳ vague ಆಗುತ್ತದೆ. ತಾವು ಇದರ ಬಗ್ಗೆ ಆಲೋಚನೆಯನ್ನು ಮಾಡಿ. 'any person who attempts to commit' ಎಂದರೆ, ಇಲ್ಲಿ ಕಾನೂನಿನ ದುರುಪಯೋಗ ಆಗತಕ್ಕಂಥ ಸಂಭವವಿದೆ. ಆದರೆ ಅದಕ್ಕೆ ಶಿಕ್ಷೆ ಆಗಬೇಕು. attempts to commit ಆದರೂ ಕೂಡ ಶಿಕ್ಷೆ ಆಗತಕ್ಕಂಥ ಪ್ರಾವಿಶನ್ ಅನ್ನು ನಾವು ಕಾನೂನಿನಲ್ಲಿ ಇಟ್ಟರೆ ಅದು ಸರಿಯಾಗುವುದಿಲ್ಲ. ಆಮೇಲೆ abets ಇದು ಬಹಳ ಇದರ ವ್ಯಾಪ್ತಿ ಏನಾಗುತ್ತದೆಂದರೆ 'any person who abets' ಅಂದರೆ ಇದರ ವ್ಯಾಪ್ತಿ ಬಹಳ ದೊಡ್ಡದಾಗುತ್ತದೆ. ಅಂದರೆ ಕಾನೂನಿನಲ್ಲಿ

ಇದರ ದುರುಪಯೋಗವಾಗತಕ್ಕಂಥದ್ದು ಆಗುತ್ತದೆ. ಆಮೇಲೆ incites. ಅಂದರೆ ನೀವು ಪ್ರಚೋದನೆ ಕೊಟ್ಟಿದ್ದಾರೆ, ಯಾರ್‍ಯಾರು ಪ್ರಚೋದನೆ ಕೊಟ್ಟಿದ್ದಾರೆ ಎಂದು ನೀವು ಅಲ್ಲಿರತಕ್ಕಂಥ ಪೊಲೀಸ್ ಅಧಿಕಾರಿಗಳ ಕೈಯಲ್ಲಿ ಯಾರಿಗಾದರೂ ಫಿಕ್ಸ್ ಮಾಡಬೇಕೆಂದರೆ ಈ ಕಾನೂನನ್ನು ಯೂಸ್ ಮಾಡುವಂಥ ಒಂದು ಉದ್ದೇಶವಿರುತ್ತದೆ. ಏಕೆಂದರೆ ಇದರಲ್ಲಿ ನೀವು ಶಿಕ್ಷೆ ಮೂರು ವರ್ಷವೆಂದು ನೀವು ನಿಗಧಿಪಡಿಸಿದ್ದೀರಿ. ಮೂರು ವರ್ಷ ಶಿಕ್ಷೆ ಆದರೆ ಯಾವ ಮನುಷ್ಯ ಕೂಡ ಇವೊತ್ತು ಎಲೆಕ್ಷನ್‌ಗೆ ನಿಲ್ಲುವುದಕ್ಕಾಗುವುದಿಲ್ಲ. As per the Representation of the People Act, ಎರಡು ವರ್ಷದ ಮೇಲೆ ಶಿಕ್ಷೆ ಆಗಿದ್ದರೆ ಅಂಥವರು ಎಲೆಕ್ಷನ್‌ಗೆ contest ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಇದರ ವ್ಯಾಪ್ತಿಯಲ್ಲಿ ನೀವು ಇದನ್ನು specific ಆಗಿ define ಮಾಡಿ. ಏನೆಂದರೆ, ಈ 'organization commits' ಎನ್ನುವುದನ್ನು ತೆಗೆದು ಹಾಕಬೇಕು. ಆಮೇಲೆ 'attempts to commit' ಅನ್ನು ತೆಗೆಯಬೇಕು, 'abets' ಅನ್ನೂ ತೆಗೆಯಬೇಕು, "incites" ಅನ್ನೂ ತೆಗೆಯಬೇಕು. ಯಾವ ವ್ಯಕ್ತಿ ಇದರಲ್ಲಿ ಷಾಮೀಲಾಗಿದ್ದಾನೆ ಅವನಿಗೆ ನೀವು ಇದರಲ್ಲಿ ಶಿಕ್ಷೆ ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಕ್ಲಾರಿಫಿಕೇಶನ್ ಕೊಡಬೇಕು. ಇನ್ನು ಎರಡನೆಯದಾಗಿ, ಇಲ್ಲಿ ಕೆಲವೊಂದರಲ್ಲಿ violence ಎಂದರೆ ಏನು what do you define as violence? ಯಾವಾಗ ಕಾಯಿದೆ ಪ್ರಕಾರ ಶಿಕ್ಷೆ ಕೊಡಬಹುದೋ ಅಥವಾ ಯಾರ ಮೇಲಾದರೂ ಕೇಸ್ ಹಾಕಬಹುದು ಎಂದರೆ, ದಯವಿಟ್ಟು ನಾನು ಹೇಳುತ್ತಿರುವುದನ್ನು ಮಾನ್ಯ ಸಚಿವರು ಗಮನವಿಟ್ಟು ಕೇಳಬೇಕು. "Violence means activities of causing any harm, injury or endangering the life or intimidation" ಇದು ಇಲ್ಲಿಯ ತನಕ ಸರಿ ಇದೆ. ಆದರೆ intimidation ಎಂದು ಏನು ಮಾಡುವುದಿದೆ ಅದು ಬೇಕಾಗಿಲ್ಲ. ಆಮೇಲೆ 'obstruction or hindrance to any medicare service personnel in discharge of duty in the medicare service institution or damage to property' ಎಂದು ಇದೆ. ಅದು ಇರಲಿ. ಆದರೆ ಇದೊಂದು ಪದವೇನಿದೆ obstruction or hindrance ಬಹಳಷ್ಟು ಸಾರಿ ವೈದ್ಯರು ಸ್ಟ್ರೈಕ್

ಮಾಡಿದಾಗ ಅಥವಾ ಅವರ ಕೆಲವು ಸಿಬ್ಬಂದಿಗಳು ಸ್ಟ್ರೈಕ್ ಮಾಡಿರುತ್ತಾರೆ, ಅವೆಲ್ಲವೂ ಕೂಡ ಇದರ ವ್ಯಾಪ್ತಿಯಲ್ಲಿ ಬರುತ್ತದೆಯೇ ಎಂಬ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಇವೊತ್ತು ಕ್ಲಾರಿಫೈ ಮಾಡಬೇಕು. ಆಮೇಲೆ damage to property ಎನ್ನುವ ಬಗ್ಗೆ ಕೂಡ ಹೇಳಿದ್ದೀರಿ. ಇಲ್ಲಿ recovery of loss ನಲ್ಲಿ ನೀವು ಎರಡು ಪಟ್ಟು ರೆಕವರಿ ಮಾಡತಕ್ಕಂಥ ಅವಶ್ಯಕತೆ ಇದೆ ಎಂದು ನನಗನ್ನಿಸುವುದಿಲ್ಲ. ಇದನ್ನು ನೀವು ರೆಡ್ಯೂಸ್ ಮಾಡಿ ಆ ಪ್ರಾಪರ್ಟಿಗೆ ಏನು ವ್ಯಾಲ್ಯು ಇದೆ ಅದರಷ್ಟೂ ನೀವು ರೆಕವರಿ ಮಾಡತಕ್ಕಂಥದ್ದಕ್ಕೆ ಮಾತ್ರ ತಿದ್ದುಪಡಿಯಲ್ಲಿ ತರಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಮನವಿಯನ್ನು ಮಾಡುತ್ತೇನೆ. ಟೂ ಟೈಮ್ಸ್ ಮಾಡತಕ್ಕಂಥದ್ದು ಅವಶ್ಯಕತೆ ಇಲ್ಲ. ಆಮೇಲೆ ಇನ್ನು ನೀವು 3 ವರ್ಷಗಳ ಕಾಲವೆಂದು ಶಿಕ್ಷೆಯನ್ನು ನೀವೇನು ನಿಗದಿಪಡಿಸಿದ್ದೀರಿ ಇದು ಅನಗತ್ಯವೆಂದು ನಾನು ಹೇಳಬಯಸುತ್ತೇನೆ. ಈ Bill ಬಹಳ ಅವಶ್ಯಕತೆ ಇದೆ. ಆದರೆ ಮೂರು ವರ್ಷಗಳ ಶಿಕ್ಷೆ ಅನಗತ್ಯ. ಇದನ್ನು ಮೂರು ವರ್ಷದಿಂದ ಒಂದು ವರ್ಷಕ್ಕೆ ಇಳಿಸಬೇಕು. ಈ ಬಗ್ಗೆ ಮಾನ್ಯ ಸಚಿವರು ರೂಲ್ಸ್‌ನಲ್ಲಿ ತರುತ್ತೇವೆಂದು ಹೇಳುತ್ತಾರೆ. ಆದರೆ ನೀವು ಬಿಲ್‌ನಲ್ಲಿ ಮೂರು ವರ್ಷ ಶಿಕ್ಷೆಯೆಂದು ನೀವು ಪಾಸ್ ಮಾಡಿದರೆ ಅಲ್ಲಿರತಕ್ಕಂಥ ಜಡ್ಜ್‌ಮೆಂಟ್ ಕೊಡುವವರು ಮೂರು ವರ್ಷ ಶಿಕ್ಷೆಯೆಂದು ಜಡ್ಜ್‌ಮೆಂಟ್ ಕೊಡುವುದಕ್ಕೆ ಅವಕಾಶವಿರುತ್ತದೆ. ಅದಕ್ಕಾಗಿ ನೀವೇನು ಮೂರು ವರ್ಷ ಶಿಕ್ಷೆ ಎಂದು ಹೇಳಿದ್ದೀರಿ ಅದನ್ನು ಆರು ತಿಂಗಳು ಅಥವಾ ಒಂದು ವರ್ಷಕ್ಕೆ ಇಳಿಸಬೇಕೆಂದು ನಾನು ಮನವಿ ಮಾಡುತ್ತೇನೆ. ಆಮೇಲೆ ಅವರು ಇನ್ನೊಂದು ಹೇಳಿದ್ದಾರೆ. ಈಗ medicare, what are the medicare services ಎಂದು ಇಲ್ಲಿ ಡಿಫೈನ್ ಮಾಡಿದ್ದಾರೆ. ಇದರಲ್ಲಿ dentists ಎನ್ನತಕ್ಕಂಥದ್ದನ್ನು ಹೇಳುವುದನ್ನು ನೀವು ಮರೆತುಹೋಗಿದ್ದೀರಿ. ಈಗ ಇಲ್ಲಿ ಸುಧಾಕರ್ ಇಲ್ಲ. ಅವರೂ ಕೂಡ ಈ ಬಗ್ಗೆ ರಿಕ್ವೆಸ್ಟ್ ಮಾಡುತ್ತಿದ್ದರು. ನೀವು dentists ಎನ್ನತಕ್ಕಂಥದ್ದನ್ನೂ ಕೂಡ ಸೇರಿಸಬೇಕು. ಏಕೆಂದರೆ ಇಲ್ಲಿ registered medical practitioners ರವರ ಜೊತೆ dentists ಕೂಡ ನೀವು ಮಾಡಬೇಕು. ಆಮೇಲೆ ನೀವು ಇದರಲ್ಲಿ specific ಆಗಿ ಹೇಳಬೇಕು. ಏನೆಂದರೆ ಕೆಲವು ಸಾರಿ registered medical practitioners ಎಂದು ಹೇಳಿದ ಮೇಲೆ ಕೆಲವೊಂದು quacks ಗೆ ಅವರಿಗೆಲ್ಲಾ ಇದರಲ್ಲಿ ಪ್ರೊಟೆಕ್ಷನ್ ಸಿಗಬಾರದು. ಆದುದರಿಂದ ಇದರ ಬಗ್ಗೆ ನೀವು specific ಆಗಿ ಸ್ಪಷ್ಟೀಕರಣ ಕೊಡಬೇಕು.

ಆಮೇಲೆ ಈ ಒಂದು ಕಾನೂನನ್ನು ಇಂಪ್ಲಿಮೆಂಟ್ ಮಾಡುವಾಗ ನೀವು ಯಾರನ್ನು ಸಾಕ್ಷಿದಾರರನ್ನಾಗಿ ತೆಗೆದುಕೊಳ್ಳುತ್ತೀರಿ ಎನ್ನತಕ್ಕಂಥದ್ದು ಬಹಳ ಮುಖ್ಯವಾಗಿರುತ್ತದೆ. ಏಕೆಂದರೆ ಅದು criminal procedure code ಪ್ರಕಾರ ನೀವು ಮಾಡಬೇಕು. ಆದರೆ ಪ್ರತಿಯೊಂದು ಇಂಥ ಗಲಾಟೆಗಳು ಆಗತಕ್ಕಂಥದ್ದು ತಾಲ್ಲೂಕು ಲೆವೆಲ್ ಆಸ್ಪತ್ರೆಗಳಲ್ಲಿ. ಅದರಲ್ಲಿಯೂ ವಿಶೇಷವಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ. ಖಾಸಗಿ ಯಾಗಿ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿಯೂ ಕೂಡ ಇಂಥದ್ದು ಆಗತಕ್ಕಂಥ ಸಂಭವ ಇರುತ್ತದೆ. ಅದಕ್ಕಾಗಿ ನಾನು ಮಾನ್ಯ ಸಚಿವರಲ್ಲಿ ನಾನು ಒಂದು ಮನವಿಯನ್ನು ಮಾಡುತ್ತೇನೆ. ಈಗ ಆರೋಗ್ಯ ಸಚಿವರು ಇಲ್ಲಿ ಇರಬೇಕಾಗಿತ್ತು. ಆದರೆ ಈಗ ಅವರು ಇಲ್ಲಿ ಇಲ್ಲ. ಆದರೆ ಇವೊತ್ತು ಹಿಂದೆ ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದ ಮತ್ತು ಹಾಲಿ ಗೃಹ ಸಚಿವರಾಗಿರುವ ಡಾ॥ ವಿ.ಎಸ್. ಆಚಾರ್ಯರವರೆ ಈ ಬಿಲ್ ಬಗ್ಗೆ ಪರ್ಯಾಲೋಚನಾ ಪ್ರಸ್ತಾವವನ್ನು ಮಂಡಿಸಿದ್ದಾರೆ. ನೀವು ಈ ಬಿಲ್‌ನಲ್ಲಿ ಕಡ್ಡಾಯವಾಗಿ ಒಂದನ್ನು ಮಾಡಬೇಕು. ಅದೇನೆಂದರೆ, ಇಲ್ಲಿ ನನ್ನ ಎಡಗಡೆ ಇರತಕ್ಕಂಥ ಶಾಸಕರು ಕೂಡ ಬಹಳ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಏನೆಂದರೆ, ಇವೊತ್ತು ವೈದ್ಯರು ಸರಿಯಾಗಿ ಉಪಚಾರ ಮಾಡದೇ ಇದ್ದರೆ, ಭಾವೋದ್ವೇಗಕ್ಕೆ ಒಳಗಾಗಿ ಕೆಲವೊಂದು ಸಾರಿ ಅಂಥ ಘಟನೆಗಳು ಆಗುತ್ತವೆ. ಅದನ್ನು ತಡೆಗಟ್ಟುವುದಕ್ಕೆ ನೀವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ?ಅಂದರೆ specific ಆಗಿ ತಾಲ್ಲೂಕು ಆಸ್ಪತ್ರೆಗಳಲ್ಲಿ ಒಂದು ಪೋಲೀಸ್ ಔಟ್‌ಪೋಸ್ಟ್ ಹಾಕಬೇಕೆಂದು ಪದೇ ಪದೇ ವೈದ್ಯರು ಮನವಿ ಮಾಡಿದರೂ ಕೂಡ ಅದಕ್ಕೆ ಸರ್ಕಾರ ಸ್ಪಂಧಿಸುತ್ತಿಲ್ಲ. ನೀವು ಗೃಹ ಸಚಿವರಾಗಿ ರುವುದರಿಂದ ನೀವು ಕಡೇ ಪಕ್ಷ ತಾಲ್ಲೂಕು ಲೆವೆಲ್‌ನಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ಪೋಲೀಸ್ ಔಟ್‌ಪೋಸ್ಟ್ ಹಾಕಿದರೆ ಇಂಥ ಘಟನೆಗಳು ಆಗುವುದನ್ನು ತಡೆಗಟ್ಟಬಹುದು. ನೀವು ಪ್ರೈವೇಟ್ ಆಸ್ಪತ್ರೆಯಲ್ಲಿ ಪೋಲೀಸ್ ಸಿಬ್ಬಂದಿಯನ್ನು ಹಾಕುವುದಕ್ಕೆ ಆಗುವುದಿಲ್ಲ. ಪ್ರೈವೇಟ್ ಹಾಸ್ಪಿಟಲ್‌ಗೆ ನೀವು ಮಲ್ಟಿ ಬೆಡೆಡ್ ಆಸ್ಪತ್ರೆ ಆಗಿದ್ದರೆ ನೀವು ನಮ್ಮ ಶಾಸಕರು ಹೇಳಿದ ಹಾಗೆ ನೀವು ಕ್ಯಾಮರಾಗಳನ್ನು ಹಾಕಬಹುದು. ಅಂದರೆ ನೀವು ಆ ಕ್ಯಾಮರಾದಲ್ಲಿ ನೋಡಬಹುದು, ಯಾರು ಬಂದು ಗಲಾಟೆ ಮಾಡಿದ್ದಾರೆ, ಯಾರ ಮೇಲೆ ಕೇಸ್ ಹಾಕಬಹುದು ಎಂದು ತಿಳಿಯಬಹುದು. ಈಗ ನಾನೇನು ಕೆಲವೊಂದು ಸಲಹೆಗಳನ್ನು ಕೊಟ್ಟಿದ್ದೇನೆ ಅವೆಲ್ಲವೂ ಕೂಡ ಸಾಮಾನ್ಯ ಜನರ ಹಿತದೃಷ್ಟಿಯಿಂದಲೂ ಕೂಡ ಒಳ್ಳೆಯದಾಗಿವೆ. ನಾವು ಎಲ್ಲಿಯವರೆವಿಗೆ ವೈದ್ಯರಿಗೆ ಸರಿಯಾಗಿ ಕೆಲಸ ಮಾಡುವುದಕ್ಕೆ ಬಿಡುವುದಿಲ್ಲವೋ ಅಲ್ಲಿಯವರೆವಿಗೆ ಅವರು

ಗ್ರಾಮೀಣ ಪ್ರದೇಶಕ್ಕೆ ಬಂದು ಕೆಲಸ ಮಾಡುವುದಿಲ್ಲ. ಅದಕ್ಕಾಗಿ ನಾನು 'abetment' ಎನ್ನುವ ಪದಗಳನ್ನು ಸೇರಿಸಿದ್ದೀರಿ ಅದನ್ನು ದಯವಿಟ್ಟು ಕೈಬಿಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) :- ಮಾನ್ಯ ಅಧ್ಯಕ್ಷರೇ, ಇವತ್ತು ಈ ವಿಧೇಯಕವನ್ನು ತಂದಿದ್ದೀರಿ, ಬಹಳ ಸಂತೋಷ. ಆದರೆ ಈ ವಿಧೇಯಕವನ್ನು ಮಂಡಿಸುವುದಕ್ಕೆ ಮೊದಲು ಸರ್ಕಾರ ಕೂಡ ಆಲೋಚನೆ ಮಾಡಬೇಕಾಗಿತ್ತು. ಒಂದು ಕಡೆ ಡಾಕ್ಟರುಗಳಿಗೆ ರಕ್ಷಣೆ ಕೊಡುತ್ತೇವೆ ಎಂದು ಹೇಳುತ್ತೀರಿ ತೊಂದರೆ ಇಲ್ಲ. ಆದರೆ ಅದೇ ರೀತಿಯಾಗಿ ಸಾರ್ವಜನಿಕರ ತೊಂದರೆಗಳನ್ನು ಕೂಡ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ಹಳ್ಳಿಗಾಡು ಪ್ರದೇಶದಲ್ಲಿ ಪ್ರಾರಂಭ ಮಾಡಿದಂತಹ 50-bedded ಆಸ್ಪತ್ರೆಗಳು ಇವತ್ತಿಗೂ ಅದೇ ಸ್ಥಿತಿಯಲ್ಲಿ ಇವೆ. ಅಲ್ಲಿ ಕೂಡ ಇಬ್ಬರು-ಮೂವರು ಡಾಕ್ಟರುಗಳು ಇಲ್ಲ. ಈಗ ಅವುಗಳನ್ನು 100-bedded ಆಸ್ಪತ್ರೆಗಳು ಎಂದು ನೀವು upgrade ಮಾಡಿಬಿಟ್ಟಿದ್ದೀರಿ. ಈ 50-bedded ಆಸ್ಪತ್ರೆಗಳಿಗೆ ಏನು ಸೌಕರ್ಯಗಳು ಕೊಡಬೇಕಾಗಿತ್ತು, ಅದು ಇವತ್ತಿನವರೆಗೂ complete ಆಗಿಲ್ಲ. ಅಲ್ಲಿ ಸಿಬ್ಬಂದಿಗಳು ಇಲ್ಲ. ಅಲ್ಲಿ 100 bedded ಆಸ್ಪತ್ರೆಗಳು ಎಂದು ಎರಡು ವರ್ಷಗಳಿಂದ ಮಾಡಿದ್ದೀರಿ. ಈಗ ಏನಾಗಿದೆ ಅಲ್ಲಿ ಸರಿಯಾದ ಸೌಕರ್ಯಗಳು ಸಿಕ್ಕಿಲ್ಲ. ಅಲ್ಲಿ ಒಬ್ಬರು ಡಾಕ್ಟರನ್ನು ಹಾಕಿರುತ್ತಾರೆ, ಅಲ್ಲಿ ಮೂರು ವರ್ಷದಿಂದ ಐದು ವರ್ಷಗಳಾದರೂ ಕೂಡ ಆ ಡಾಕ್ಟರು ವಿವಿಧ ಕಾಯಿಲೆಗಳಿಗೆ ನೋಡಿಕೊಳ್ಳಬೇಕಾಗುತ್ತದೆ. ಹಳ್ಳಿ ಜನರಿಗೆ ಏನು ಕಾಯಿಲೆ ಬಂದಿದೆ ಎಂದು ಗೊತ್ತಾಗುವುದಿಲ್ಲ. ಜನರು ಆ ಡಾಕ್ಟರ ಹತ್ತಿರ ಹೋದಾಗ ಅವರು ನಿಮಗೆ ಇಂತಹ ಕಾಯಿಲೆ ಇದೆ, ಬೆಂಗಳೂರಿಗೆ ಹೋಗಿ ಎಂದರೆ ಜನ ಕೋಪ ಮಾಡಿಕೊಳ್ಳುತ್ತಾರೆ. ಈ ವಿಧೇಯಕವನ್ನು ನಾವು ಯಾರೂ ಕೂಡ ವಿರೋಧ ಮಾಡುತ್ತಿಲ್ಲ. ಡಾಕ್ಟರುಗಳಿಗೂ ರಕ್ಷಣೆ ಕೊಡಬೇಕಾಗುತ್ತದೆ. ನೀವು ಹಳ್ಳಿಗಳಲ್ಲಿ ಒಬ್ಬ ಡಾಕ್ಟರುಗಳನ್ನು ಹಾಕುತ್ತೀರಿ, ಹಳ್ಳಿಗಳಿಗೆ ಎರಡರಿಂದ ಮೂರು ಜನ ಡಾಕ್ಟರುಗಳು ಬೇಕಾಗುತ್ತದೆ. ಅಂತಹ ಕಡೆ ನೀವು ಭರ್ತಿ ಮಾಡದೇ, ಇಂತಹ ಗಲಾಟೆಗಳು ಆಗುವಂತಹ ವಿಚಾರದಲ್ಲಿ ನೀವು ವಿಧೇಯಕಗಳನ್ನು ತಂದು ಅವರಿಗೆ ಒಂದು ಕಡೆ ರಕ್ಷಣೆ ಕೊಡುತ್ತೀವೆಂದು ಹೇಳುತ್ತೀರಿ, ಇನ್ನೊಂದು ಕಡೆ ಹಳ್ಳಿ ಜನರನ್ನು ವಿರೋಧ ಮಾಡುವಂತಹ ಪರಿಸ್ಥಿತಿಗೆ ನೀವು ಹೋಗಿದ್ದೀರಿ. ನಮ್ಮ ಕಡೆ National Highway ಇದೆ. ಪುಟ್ಟಪರ್ತಿಗೆ ಬಹಳ ಜನ ಹೋಗುತ್ತಾರೆ. ಅಂತಹ

ಸಂದರ್ಭದಲ್ಲಿ ಅಲ್ಲಿ accident ಆಗುತ್ತದೆ, spot out ಆಗುತ್ತದೆ. ಅವರಿಗೆ ತತ್‌ಕ್ಷಣ ಚಿಕಿತ್ಸೆ ಕೊಡಬೇಕಾದರೆ ಆಸ್ಪತ್ರೆಯಲ್ಲಿ ಏನೂ ಸೌಕರ್ಯ ಇಲ್ಲ. ಪುಟ್ಟಪರ್ತಿಗೆ VVIP ಜನ ಬರುತ್ತಿರುತ್ತಾರೆ. High way ಆಸ್ಪತ್ರೆಗಳನ್ನು ನೀವು ಇಲ್ಲಿಯವರೆಗೂ ಕೂಡ ಪ್ರಾರಂಭ ಮಾಡಿಲ್ಲ. ಅಲ್ಲದೆ Health Department ನಿಂದ ಆರೋಗ್ಯ ಕವಚ ಎಂದು ಒಂದು ಯೋಜನೆಗೆ ನೀವು ಪ್ರಚಾರ ಕೊಟ್ಟಿರಿ. 77 ಆಂಬ್ಯುಲೆನ್ಸ್ ನಾವು ತಂದಿದ್ದೇವೆ, ಇನ್ನು 200 ಆಂಬ್ಯುಲೆನ್ಸ್ ಕೊಡುತ್ತೇವೆಂದು ಹೇಳಿದಿರಿ. ನೀವು ತತ್‌ಕ್ಷಣ 108ಕ್ಕೆ ದೂರವಾಣಿ ಮಾಡಿದರೆ ಕೆಲವೇ ನಿಮಿಷಗಳಲ್ಲಿ ನಿಮ್ಮ ಹತ್ತಿರ ಬರುತ್ತೇವೆಂದು ಹೇಳಿದ್ದೀರಿ. ಆದರೆ ನಮ್ಮ ಊರಿನಿಂದ 108 ಸಂಖ್ಯೆಗೆ 1008 ಕರೆ ಮಾಡಿದರೂ ಕೂಡ ಒಂದು ಆಂಬ್ಯುಲೆನ್ಸ್ ಬರಲಿಲ್ಲ. ಸರ್ಕಾರದವರು ಇಂಥಾದ್ದನ್ನು ಮಾಡುವುದಕ್ಕೆ ಆಲೋಚನೆ ಮಾಡುವಾಗ ನೀವು full fledge ಆಗಿದ್ದಾಗ ಮಾತ್ರ ಸಾಧ್ಯ. ನೀವು ಆಂಬ್ಯುಲೆನ್ಸ್ ಕೊಡುತ್ತೇವೆ ಎಂದರೆ ಎಲ್ಲಾ ಕಡೆ ಕೊಡಿ. ಮತ್ತೆ ಇನ್ನೊಂದು ಸೀಮಂತ ಕಾರ್ಯಕ್ರಮ ಎಂದು ಹಮ್ಮಿಕೊಂಡಿದ್ದೀರಿ. ಆ ಸೀಮಂತ ಕಾರ್ಯಕ್ರಮದಲ್ಲಿ ಏನೂ ದುಡ್ಡಿಲ್ಲ.

ಅಧ್ಯಕ್ಷರು :- ಆರೋಗ್ಯದ ಬಗ್ಗೆ ವಿಷಯ ಬಂದಾಗ detail discussion ಮಾಡುವಿರಂತೆ.

ಶ್ರೀ ಎನ್ ಸಂಪಂಗಿ :- ಆರೋಗ್ಯ ಇಲಾಖೆಯಲ್ಲಿ ನೀವು ಹಳ್ಳಿಗಳಿಗೆ ಸೀಮಂತ ಕಾರ್ಯಕ್ರಮ ಎಂದು ಕೊಟ್ಟಿದ್ದೀರಿ. ಡಾಕ್ಟರುಗಳು ಏನು ಮಾಡುತ್ತಾರೆಂದರೆ ನಮ್ಮ ವಿರೋಧಿಗಳು ಹಣಕಾಸಿನ ವಿಚಾರದಲ್ಲಿ ಸ್ವಲ್ಪ ಹೆಚ್ಚಿಗೆ ಇದ್ದರೆ, ಅವರನ್ನು ಕರೆದುಕೊಂಡು ಬಂದು sponsor ಮಾಡಿಕೊಂಡು, ಈ ಗರ್ಭಿಣಿ ಸ್ತ್ರೀಯರಿಗೆ ಸೀರೆಗಳನ್ನು ಕೊಡುವಂತಹ ಕೆಲಸಕ್ಕೆ ಹೋಗುತ್ತಿದ್ದಾರೆ. ಈಗ ಡಾಕ್ಟರುಗಳಿಂದ ಇಂತಹ ಕೆಲಸಗಳು ಆದಾಗ ರಾಜಕೀಯಗಳು ಬಂದಾಗ ನೋವಾಗುತ್ತದೆ. ಅದಕ್ಕೆ ಆ ಸೀಮಂತ ಕಾರ್ಯಕ್ರಮದಲ್ಲಿ ಏನಾದರೂ ಹಣ ಇದ್ದರೆ ಬಿಡುಗಡೆ ಮಾಡಿಬಿಟ್ಟು, ಆರೋಗ್ಯ ಇಲಾಖೆಯಿಂದ ಆ ಕಾರ್ಯಕ್ರಮವನ್ನು ಮಾಡಲಿ. ಕೆಲವು ವಿಚಾರಗಳಲ್ಲಿ ಸರ್ಕಾರ ಕೂಡ ಎಚ್ಚೆತ್ತುಕೊಳ್ಳಬೇಕಾಗುತ್ತದೆ. ಈ ವಿಧೇಯಕದ ವಿಚಾರದಲ್ಲಿ ನಾವೆಲ್ಲರೂ ಕೂಡ support ಮಾಡುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು ನಗರ ದಕ್ಷಿಣ) :- ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ನಾನು ಸ್ವಾಗತ ಮಾಡಿದರೂ ಕೂಡ ಯಾವ

ಸನ್ನಿವೇಶಗಳಲ್ಲಿ ಗಲಾಟೆಗಳು ಉದ್ಭವವಾಗುತ್ತವೆ ಎಂದು ಸ್ವಲ್ಪ ವಿಶ್ಲೇಷಣೆ ಮಾಡುವಂತಹ ಅವಶ್ಯಕತೆ ಇದೆ. ರೋಗಿಯನ್ನು ಆಸ್ಪತ್ರೆಗೆ ತಂದು admission ಮಾಡುವಂತಹ ಹಂತದಲ್ಲಿ ಅಲ್ಲಿ doctors ಇಲ್ಲದಿರುವಾಗ, ಕ್ಲಪ್ತ ಸಮಯದಲ್ಲಿ ಬೇಕಾಗಿರುವಂತಹ treatment ಸಿಗದಿರುವಾಗ ಖಂಡಿತ ಉದ್ವೇಗಕ್ಕೆ ಒಳಗಾಗುತ್ತಾರೆ. ಸಿಬ್ಬಂದಿಗಳ ಹಾಗೂ ವೈದ್ಯಾಧಿಕಾರಿಗಳ ನೇಮಕಾತಿ ಎಲ್ಲ ಕಡೆಗಳಲ್ಲಿ ಆದರೆ ಮಾತ್ರ ಈ ಸಮಸ್ಯೆಗೆ ಸ್ವಲ್ಪ ಪರಿಹಾರ ಕಾಣಬಹುದು. PHCಯಿಂದ ಜಿಲ್ಲಾ ಆಸ್ಪತ್ರೆಗೆ ಬರುವಂತಹ ಸನ್ನಿವೇಶ ಎಲ್ಲಿ ಬರುತ್ತದೆ ಎಂದು ಹೇಳಿದರೆ, ಅಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಕೊನೆಯ ಒಂದು ಸನ್ನಿವೇಶದಲ್ಲಿ ಉಲ್ಬಣ ಸ್ಥಿತಿಯಲ್ಲಿರುವಂತಹ ಸಂದರ್ಭದಲ್ಲಿ ಜೀವ ಉಳಿಸುವುದಕ್ಕಾಗಿಲ್ಲ ಎಂದ ತಕ್ಷಣ ಇವರ ಕಡೆಯಿಂದ ನಿರ್ಲಕ್ಷ್ಯ ಎಂದು ಹೇಳಿ ಸಮಸ್ಯೆಗಳು ಉದ್ಬವವಾಗುವುದಕ್ಕೆ ಕಾರಣವಾಗುತ್ತವೆ. ಇನ್ನೊಂದು ಕಡೆಯಲ್ಲಿ prescription ಕೊಡುತ್ತಾರೆ. ಗತಿ ಇಲ್ಲದೆ ಅಸಹಾಯಕ ಸ್ಥಿತಿಯಲ್ಲಿ ಆಸ್ಪತ್ರೆಗೆ ಬರುವುದು. ಅಂತಹ ಸಂದರ್ಭದಲ್ಲಿ ಹೊರಗಡೆಯಿಂದ 600 ರೂಪಾಯಿಯಿಂದ ಒಂದು ಸಾವಿರ ರೂಪಾಯಿಯವರೆಗೂ prescription ಬರೆದು ಕೊಡುತ್ತಾರೆ. ಎಲ್ಲಿಂದ ಅವರು honour ಮಾಡಬೇಕು. ಅಂತಹ ಸಂದರ್ಭದಲ್ಲಿ ಕೂಡ ಉದ್ವೇಗಕ್ಕೆ ಒಳಗಾಗುತ್ತಾರೆ. ಈ ರೀತಿಯಾಗಿ ಸರ್ಕಾರಿ ಆಸ್ಪತ್ರೆಗೆ ಬಂದಾಗ ಔಷಧಗಳು ಇರುವುದಿಲ್ಲ. ಈ logistic society ಯಿಂದ ಯಾವರೀತಿಯಲ್ಲಿ supply ಮಾಡುತ್ತಾರೆ? ಯಾವ ಸಂದರ್ಭದಲ್ಲಿ ಈ ಆಸ್ಪತ್ರೆಯವರು ಏನು order ಕೊಟ್ಟಿದ್ದಾರೆ, ಅದಕ್ಕೆ ಇವರು ಏನು ವಿತರಣೆ ಮಾಡುತ್ತಿದ್ದಾರೆ? ನಾನು ಇದರ ಬಗ್ಗೆ ಮಾತ್ರ ಹೇಳುತ್ತಿಲ್ಲ. ಇದರಲ್ಲಿ ಸೂಕ್ಷ್ಮವಾಗಿ ಅನೇಕ ಸಂಗತಿಗಳನ್ನು ಗಮನಿಸಬೇಕು. ಅನೇಕ ಸಂದರ್ಭಗಳಲ್ಲಿ ರೋಗಿಗಳನ್ನು ಶಸ್ತ್ರ ಚಿಕಿತ್ಸೆಗೆ ತೆಗೆದುಕೊಂಡು ಹೋಗಬೇಕು. ಮೊನ್ನೆ Public Accounts Committee analysis ಮಾಡಿತ್ತು. ಎಷ್ಟೊಂದು supply ಆಗಿರುವಂತಹ medical instrumentಗಳು ಇವತ್ತು ಯಾವ ಸ್ಥಿತಿಯಲ್ಲಿವೆ? ಅವುಗಳನ್ನು ಉಪಯೋಗ ಮಾಡುವುದಕ್ಕೆ ಆಗ ುತ್ತಿಲ್ಲ. ಅದನ್ನು ಏಕೆ ಉಪಯೋಗ ಮಾಡುವುದಕ್ಕಾಗುತ್ತಿಲ್ಲ? ಇವುಗಳು ಯಾವ brokersನಿಂದ ಬಂದು supply ಆಗಿದೆ? ಇದೆಲ್ಲ ಸಂಗತಿಗಳನ್ನು ಸರಿಪಡಿಸಿದಾಗ ಮಾತ್ರ ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕಾಗುತ್ತದೆ. ನಾವು ಅನೇಕ ಸಂದರ್ಭದಲ್ಲಿ security service ಬಗ್ಗೆ ಮಾತನಾಡಿದ್ದೇವೆ. ನಾವು

clinical service ಜೊತೆಯಲ್ಲಿ security services ಅನ್ನು ಕೂಡ ಸರ್ಕಾರಿ ಆಸ್ಪತ್ರೆಗಳಲ್ಲಿ insist ಮಾಡಬೇಕು. ಅಷ್ಟು ಮಾತ್ರವಲ್ಲ, ನಾನು ಇನ್ನೊಂದು ವಿಚಾರ ತಮ್ಮ ಗಮನಕ್ಕೆ ತರುವುದೇನೆಂದರೆ ಈ security service ಜೊತೆಯಲ್ಲಿ PRO ಸಂಬಂಧಗಳನ್ನು, ಅನೇಕ ಸಂದರ್ಭಗಳಲ್ಲಿ ಯಾವ ಒಂದು ಉಲ್ಬಣ ಸ್ಥಿತಿಯಲ್ಲಿ patients ಇರುತ್ತಾರೆ, ಅವರ ಸ್ಥಿತಿಗತಿಗಳು ಏನಿದೆ ಎಂದು ಅವರ ಅವಲಂಬಿತರು, ಅವರ ಸಂಬಂಧಿಗಳು ಕೇಳುತ್ತಿರುತ್ತಾರೆ. ಆ ರೀತಿ ಕೇಳುವಾಗ ಮಾಹಿತಿಗಳನ್ನು ಕೊಡುವುದಕ್ಕೆ ಆಗದಿರುವಂತಹ ಸಂದರ್ಭದಲ್ಲಿ ಈ ಉಲ್ಬಣ ಸ್ಥಿತಿ ಬರುತ್ತದೆ. ಕನಿಷ್ಠ PRO ಒಂದು ಆಸ್ಪತ್ರೆಗಳಲ್ಲಿದ್ದರೆ, ಪ್ರತಿಯೊಬ್ಬ patientನ history ಅನ್ನು ಹೇಳಿಕೊಂಡು ಏಕೆ ಶಸ್ತ್ರ ಚಿಕಿತ್ಸೆಯನ್ನು ಮಾಡಿಲ್ಲ. ಅಲ್ಲಿ ಬಿ.ಪಿಯನ್ನು control ಮಾಡಬೇಕಾಗಿದೆ, ಅದಕ್ಕೆ treatment ಮಾಡುತ್ತಿದ್ದೇವೆ ಎಂದು ಇದರ ಬಗ್ಗೆ ಎಲ್ಲಿಯುವರೆಗೂ ಈ ವ್ಯವಸ್ಥೆಯನ್ನು ಸರಿಪಡಿಸುವುದಿಲ್ಲ, ಅಲ್ಲಿಯವರೆಗೂ ಈ ಸಮಸ್ಯೆಗಳು ಸಾಮಾನ್ಯವಾಗಿ ಇರುತ್ತವೆ. ಈ ಹಿನ್ನೆಲೆಯಲ್ಲಿ ಈ ಬಿಲ್‌ನ್ನು ಸ್ವಾಗತ ಮಾಡಿದರೂ ಕೂಡ ಈ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಿ.ಬಿ. ರಾಮಸ್ವಾಮಿಗೌಡ (ಕುಣಿಗಲ್) :- ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದನೆಗಳನ್ನು ಸಲ್ಲಿಸುತ್ತೇನೆ. ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರ ಮತ್ತು ವೈದ್ಯೋಪಚಾರ ಸಂಸ್ಥೆಯ ಆಸ್ತಿಪಾಸ್ತಿಯ ಮೇಲೆ ನಷ್ಟ ಮಾಡುವುದರ ಬಗ್ಗೆ ನಿಷೇಧದ ವಿಧೇಯಕವನ್ನು ತರಬೇಕೆಂದು ಹೇಳಿ ಇಲ್ಲಿ ವಿಧೇಯಕವನ್ನು ಮಂಡಿಸುತ್ತಿದ್ದೀರಿ. ಈ ವಿಧೇಯಕ ಮಂಡನೆ ಬಗ್ಗೆ ನಾನು ಬಹಳಷ್ಟು ವಿರೋಧವನ್ನು ವ್ಯಕ್ತಪಡಿಸುವುದಕ್ಕೆ ಇಚ್ಛೆಪಡುತ್ತೇನೆ. ಕಾರಣವೇನೆಂದರೆ ಇದು ಬಹಳಷ್ಟು ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಯತಕ್ಕಂಥಾದ್ದು. ಸರ್ಕಾರಿ ಆಸ್ಪತ್ರೆಗಳಿಗೆ ಬರುವಂತಹ ಜನ ಬಹಳಷ್ಟು ಬಡವರು. ಆ ಬಡತನದಲ್ಲಿ ನೊಂದು ಬೆಂದಿರುವಂತಹ ರೋಗಿಗಳಿಗೆ ಸರಿಯಾದ ರೀತಿಯಲ್ಲಿ ಉಪಚಾರ ಸಿಗದಿದ್ದಾಗ ಯಾವುದೋ ಒಂದು ಸಂದರ್ಭದಲ್ಲಿ ಈ ರೀತಿಯ ಗಲಭೆಗಳಾಗುತ್ತವೆ. ವೈದ್ಯರು ನಡೆದುಕೊಳ್ಳುವಂತಹ ರೀತಿ ಮತ್ತು ಅವರು ತೊಂದರೆಗೆ ಸಿಕ್ಕಿ ಹಾಕಿಕೊಳ್ಳುವಂತಹ ಎಲ್ಲಾ ಸಂದರ್ಭದಲ್ಲಿ ಇಂತಹ ಗಲಾಟೆಗಳು ಆಗುತ್ತಿಲ್ಲ. ಪ್ರತಿನಿತ್ಯ ನಾವು ಸುದ್ದಿ ಮಾಧ್ಯಮದಲ್ಲಿ ಬರುತ್ತಿರುವುದನ್ನು ಗಮನಿಸಿದಾಗ, ಅವುಗಳು ವಾಸ್ತವಿಕವಾಗಿ ನೋಡುತ್ತಿರುವಂತಹ ಸಂಗತಿಯಾಗಿದೆ.

ಇವತ್ತು ಕುಣಿಗಲ್ ಆಸ್ಪತ್ರೆಯಲ್ಲಿ ಎಂಟು ಜನ ವೈದ್ಯರ ಒಂದು ಪಟ್ಟಿ ಇದೆ. ಬೆಳಿಗ್ಗೆ ಹತ್ತೂವರೆ ಗಂಟೆಯಾದರೂ ಒಬ್ಬ ವೈದ್ಯರು ಇರುವುದಿಲ್ಲ. ನಾವು DHOಗೆ phone ಮಾಡಿ ಕೇಳಿದರೆ, ಅವರು ನಾವು ಏನು ಮಾಡುವುದು ಸರ್, ಈ ರೀತಿಯ problem ಇದೆ ಎಂದು ಹೇಳುತ್ತಾರೆ. ನಾನು ಆಕ್ಷನ್ ತೆಗೆದುಕೊಳ್ಳಬೇಕೆಂದು ಬರೆದೆ. KSRTC ಬಸ್ಸಿನಲ್ಲಿ ಯಾರಾದರೂ ಒಬ್ಬರು driver ಅನ್ನು ಕರೆದು ಒಂದು ಬಸ್ಸನ್ನು ಇಳಿಸಿ ಇನ್ನೊಂದು ಬಸ್ಸು ಹತ್ತಿಸಿ ಅವರನ್ನು ಎಳೆದುಕೊಂಡು ಬಂದು duty ಮಾಡಿಸುವಂತಹ ರೀತಿಯಲ್ಲಿ, ಡಾಕ್ಟರ ವಿಚಾರದಲ್ಲಿ ಎಳೆದುಕೊಂಡು duty ಮಾಡಿಸುವಂತಹ ಸಂದರ್ಭಗಳು ಆಗುತ್ತಿದೆ. ಇಲ್ಲಿ ಮಾಡುತ್ತಿರುವಂತಹ ವಿಧೇಯಕ ಕೇವಲ ಒಂದು ಇಲಾಖೆಗೆ ಸಂಬಂಧಪಟ್ಟಂತೆ ಆಸ್ಪತ್ರೆಗೆ ಸಂಬಂಧಪಟ್ಟ ಹಾಗೆ ಮಾಡುತ್ತಿದ್ದೀರಿ. ಈ ರೀತಿಯ ಘಟನೆಗಳು ನಡೆದರೆ, ತಪ್ಪು ಮಾಡಿದರೆ, ಮೊಕದ್ದಮೆಗಳನ್ನು ಹೂಡುವುದಕ್ಕೆ ಈಗಾಗಲೇ ಬೇಕಾದಷ್ಟು ಕಾನೂನುಗಳು ಸರ್ಕಾರದಲ್ಲಿ ಇವೆ. ಇದೇ ರೀತಿ ಗಲಭೆಗಳು ಆಸ್ಪತ್ರೆಗಳಲ್ಲಿ ಅಷ್ಟೇ ಅಲ್ಲ, ವಿವಿಧ ಇಲಾಖೆಗಳಲ್ಲಿ ಕೂಡ ನಡೆಯುತ್ತಿವೆ. ಇವತ್ತು ಆಸ್ಪತ್ರೆಗೆ ಸಂಬಂಧಪಟ್ಟ ಹಾಗೆ ಡಾಕ್ಟರಗಳ ರಕ್ಷಣೆಗೋಸ್ಕರ ನೀವು ಈ ವಿಧೇಯಕವನ್ನು ಮಂಡಿಸಿದ್ದೆಯಾದರೆ ವಿವಿಧ ಇಲಾಖೆಗಳಲ್ಲಿ ನಡೆಯುವಂತಹ ಇಂತಹ ಗಲಭೆಗಳಿಗೆ ಸಂಬಂಧಪಟ್ಟಂತೆ ಎಲ್ಲಾ ಇಲಾಖೆಗಳಿಗೂ ಕೂಡ ಒಂದೊಂದು ವಿಧೇಯಕವನ್ನು ಮಂಡಿಸಬೇಕಾಗುತ್ತದೆ. ಇವತ್ತು ಸರ್ಕಾರಿ ನೌಕರರನ್ನು ಥಳಿಸತಕ್ಕಂಥಾದ್ದು ಇರಲಿ, ಅವರಿಗೆ ಹಿಂಸೆ ಕೊಡುವುದಿರಲಿ, ಅವರ ಕರ್ತವ್ಯಕ್ಕೆ ತೊಂದರೆ ಮಾಡುವಂತಹ ಸಂದರ್ಭದಲ್ಲಿ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವುದಕ್ಕೆ ಈಗಾಗಲೇ ಸಾಕಷ್ಟು ಕಾನೂನುಗಳು ಇವೆ. ಈಗಾಗಲೇ ಇರುವಂತಹ ಕಾನೂನುಗಳು ಸಾಕಾಗುತ್ತವೆ ಎನ್ನುವುದು ನನ್ನ ಅಭಿಪ್ರಾಯ ಎಂದು ನಾನು ಭಾವಿಸುತ್ತಿದ್ದೇನೆ.

ಅಧ್ಯಕ್ಷರು :- ಈಗ ಚರ್ಚೆಯನ್ನು ಮುಕ್ತಾಯಗೊಳಿಸೋಣ.

ಶ್ರೀ ನೆ.ಲ. ನರೇಂದ್ರಬಾಬು :- ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು :- ಮಾನ್ಯ ನರೇಂದ್ರ ಬಾಬುರವರೆ ತಾವು ಬೆಳಿಗ್ಗೆ ಒಂದು ವಿಷಯದ ಮೇಲೆ ಮಾತನಾಡಿದ್ದೀರಿ, ಸಾಕು.

ಶ್ರೀ ನೆ.ಲ. ನರೇಂದ್ರಬಾಬು :- ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಮಾತನ್ನು ಹೇಳಿ ಬಿಡುತ್ತೇನೆ. ಇದು ಬಹಳ important ಆಗಿದೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) :- ಮಾನ್ಯ ಅಧ್ಯಕ್ಷರೆ, ಈಗ ಈ ವಿಧೇಯಕವನ್ನು ತಂದಿದ್ದೀರಿ. ಇದು ಒಂದು ರೀತಿಯಲ್ಲಿ one way traffic ಆಗಿದೆ. ನೀವು statement of objects and reasons ಅನ್ನು ಕೊಡುವಾಗ ಒಂದೇ ಪದದಲ್ಲಿ ಹೇಳಿ ಮುಗಿಸಿ ಬಿಡುತ್ತೀರಿ. It is a new enactment ನೀವು ಇದನ್ನು ಹೊಸದಾಗಿ ತರತಕ್ಕಂಥ ಕಾನೂನಾಗಿರುವುದರಿಂದ, ಕಾನೂನಿನ ಉದ್ಧೇಶವೇನು ಎನ್ನುವುದನ್ನು ನೀವು correct ಆಗಿ ಹೇಳಬೇಕಾಗಿತ್ತು. ನೀವು ಆ ಬಗ್ಗೆ ಏನನ್ನು ಹೇಳದೇ ಬರೀ one sided ಆಗಿ ಅವರಿಗೆ ಮಾತ್ರ protection ಕೊಡಬೇಕೆಂದು ಎನ್ನುವುದಾದರೆ, ಇದು ವಾಸ್ತವಿಕವಾಗಿ ಏನಾಗಿದೆಯೆಂದರೆ, ವೈದ್ಯ ಎನ್ನುವವನು ನಾರಾಯಣನೇ ಆಗಿದ್ದ. ಅದರೆ ಬಹಳಷ್ಟು ಸಂದರ್ಭದಲ್ಲಿ ಅವನು ನಾರಾಯಣನೇ ಆಗಿರುತ್ತಾನೆ. ಆನೇಕ ಸಂದರ್ಭದಲ್ಲಿ ಅವನು ಕೆಟ್ಟವನೂ ಆಗಿರುತ್ತಾನೆ. ಈ ಎರಡೂ ಸಂದರ್ಭಗಳು ಇವೆ. ಈ ರೀತಿ one-sided ಕಾನೂನನ್ನು ತಂದಾಗ, ಅವನು ಇದನ್ನೇ ಬಂಡವಾಳವಾಗಿ ಮಾಡಿಕೊಂಡು, ಬೆಳಗ್ಗೆ ಎದ್ದು complaint ಕೊಡುತ್ತಾ ಕುಳಿತರೆ ಏನು ಮಾಡುತ್ತೀರಿ? ಇದು ಒಂದು. ಎರಡನೆಯದಾಗಿ, ನಿಮಗೆ ಯಾರೇ ಅಗಲಿ, ಒಬ್ಬ ಸರ್ಕಾರಿ ನೌಕರನೆಂದರೆ, ಅದು ಡಾಕ್ಟರ್‌ನಿಂದ ಹಿಡಿದು peonವರೆಗೂ ಕೂಡ ಅವನು ಒಬ್ಬ ಸರ್ಕಾರಿ ನೌಕರನೇ ಆಗಿರುತ್ತಾನೆ. ಅವನಿಗೆ Cr.P.C ನಲ್ಲಿ ಅವನಿಗೆ section 353ನಲ್ಲಿ ರಕ್ಷಣೆ ಇದ್ದೆ ಇರುತ್ತದೆ. ಆ ರೀತಿ ಏನಾದರೂ ಆದಾಗ ಅವನು complaint ಕೊಟ್ಟರೆ arrest ಮಾಡೇ ಮಾಡುತ್ತಾರೆ. ಅದು non-bailable ಆಗಿದ್ದು ಆ provision already ಇದ್ದಂಥ ಸಂದರ್ಭದಲ್ಲಿ ಇದನ್ನು ತರುವಂಥ ಅವಶ್ಯಕತೆ ಏನು ಇತ್ತೆಂಬುದು ಒಂದು clarification ಬೇಕು. ಇನ್ನೊಂದು ಮುಖ್ಯವಾಗಿ ಈ ವಿಧೇಯಕ ಹೊಸದಾಗಿ ಇರುವುದರಿಂದ ನೀವು ಎಲ್ಲೋ ಒಂದು ಕಡೆಗೆ Duties of the Doctors ಬಗ್ಗೆಯೂ ಮಾತನಾಡಬೇಕಾಗಿತ್ತು. ಆದರೆ ಅವರು ಯಾವ ಸಂದರ್ಭದಲ್ಲಿ ಮಾನವೀಯತೆಯಿಂದ ವರ್ತನೆ ಮಾಡಿದ್ದಾರೆಂಬುದನ್ನು ನೋಡಬೇಕಾಗುತ್ತದೆ. Exploit ಮಾಡುವುದಕ್ಕೆ ಅವಕಾಶ ಕೊಡಬಾರದು. ಅವರ ill-treat ಮಾಡುವುದಕ್ಕೆ ಅವಕಾಶ ಕೊಡಬಾರದು. ಈಗ Penalty clauseನ್ನು ಬಿಡಿ. Cognizable offence ಮಾಡಿ. Non-bailable offence ಮಾಡಿದರೆ ಅದು ದೊಡ್ಡ ಗಲಾಟೆ ಆಗುತ್ತದೆ. ತಾವು

ಇದೆಲ್ಲವನ್ನೂ ಯೋಚನೆ ಮಾಡಿ ತಂದಿದ್ದರೆ ಚೆನ್ನಾಗಿತ್ತೆಂದು ನನ್ನ ಭಾವನೆಯಾಗಿದೆ. 815 ಜನ ಡಾಕ್ಟರ್‌ಗಳು posting ಆಗಿದ್ದಾರೆ. ಅದನ್ನು ನಾವು ಇಲ್ಲವೆಂದು ಹೇಳುವುದಿಲ್ಲ. ಅವರು ಯಾರು ಬಂದು ರಿಪೋರ್ಟ್ ಮಾಡುವುದಿಲ್ಲ.

ಡಾ|| ವಿ.ಎಸ್. ಆಚಾರ್ಯ(ಗೃಹ ಸಚಿವರು)(ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೆ, ಈ ಒಂದು ವಿಧೇಯಕದ ಬಗ್ಗೆ ಹಲವಾರು ಮಂದಿ ಗಣ್ಯ ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಬಹುತೇಕ ಎಲ್ಲಾ ವೈದ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ, ಮತ್ತೆ ನಾನು ಅವರ ಎಲ್ಲಾ ವಿಚಾರಗಳನ್ನು ಗಮನಿಸಿದ್ದೇನೆ, ಮತ್ತು ಸರ್ಕಾರ ನಿಯಮಾವಳಿಗಳನ್ನು ಮಾಡುವಾಗ ಖಂಡಿತವಾಗಿಯೂ ಅವರೆಲ್ಲರ ಭಾವನೆಗಳನ್ನು incorporate ಮಾಡುತ್ತೇವೆ. ಕೊನೆಯದಾಗಿ ಪ್ರತಿಪಕ್ಷದ ಉಪ ನಾಯಕರು ಹೇಳಿರುವಂಥಾದ್ದು, ಹಾಗೂ ಇತರ ಮಾನ್ಯ ಸದಸ್ಯರುಗಳು ಹೇಳಿರುವಂಥಾದ್ದು ಡಾಕ್ಟರ್‌ಗಳು, ಅವರ ಕರ್ತವ್ಯ ಮತ್ತು ಅವರ ವೃತ್ತಿಯಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಅದರ ಬಗ್ಗೆ ಏನೆಂದು ಕೇಳಿದರು. Doctors are all governed by Medical Council. ಅವರು ಏನಾದರೂ professional misconduct ಮಾಡಿದರೆ ಅವರ ಹೆಸರನ್ನ registerನಿಂದ ಹೊರಕ್ಕೆ ಹಾಕುವಂಥ ಅವಕಾಶವಿದೆ. ಸ್ಥಳೀಯ medical association ನಲ್ಲಿ ಯಾರಾದರೂ ಒಬ್ಬ ಸದಸ್ಯರ ಬಗ್ಗೆ ವಿಚಾರಣೆ ಮಾಡುವಂಥ ಸಂದರ್ಭದಲ್ಲಿ consumers ಏನು ಇದ್ದಾರೆ, ಅವರ ಹತ್ತಿರ ವೃತ್ತಿಯಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ಆ ಡಾಕ್ಟರ್ ಮೇಲೆ ಕೇಸ್ ಹಾಕುವಂಥಾದ್ದಕ್ಕೆ ಅವಕಾಶವಿದೆ. ಹಾಗಾಗಿ ವೈದ್ಯರ ವೃತ್ತಿಪರತೆಯ ಬಗ್ಗೆ ಸಾಕಷ್ಟು ಸಾಧ್ಯತೆಗಳಿವೆ. ಮೇಲಾಗಿ ನಮ್ಮ ದೇಶ, ನಮ್ಮ ಸಂಸ್ಕೃತಿಯಲ್ಲಿ "ವೈದ್ಯೋ ನಾರಾಯಣೋ ಹರಿಃ" ಎಂದು ಹೇಳಿಕೊಂಡು ನಂಬಿಕೊಂಡು ಬಂದಂಥ ದೇಶ ಇದು. ಇನ್ನು ಡಾ|| ಅಶ್ವತ್ಥ ನಾರಾಯಣ್‌ರವರು ಹೇಳಿದ ಪ್ರಕಾರ ತಮಗೆ ಒಂದು ವಿಷಯ ಗೊತ್ತಿರಬೇಕು. ಸ್ವಾತಂತ್ರ್ಯ ಬಂದಾಗ ನಮ್ಮ ದೇಶದ ಸರಾಸರಿ ಆಯುರ್ಮಾನ 27 ವರ್ಷಗಳಿದ್ದದ್ದು, first plan period ಆಗುವಾಗ 34 ವರ್ಷಗಳಿತ್ತು. ಇವತ್ತು ಕರ್ನಾಟಕ ರಾಜ್ಯದಲ್ಲಿ ಸುದೈವದಿಂದ ಸರಾಸರಿ ಆಯುರ್ಮಾನ ಹೆಂಗಸರಿಗೆ 73 ವರ್ಷಗಳು, ಗಂಡಸರಿಗೆ 72 ವರ್ಷಗಳು ಆಗಿದೆ. ಅದೇ ಶಿಕ್ಷಣದಲ್ಲೂ ಕೂಡ ಸಾಕಷ್ಟು ಮೇಲೆ ಹೋಗಿದೆ. ಎರಡು ವೃತ್ತಿ ಅವು ವೈದ್ಯರದ್ದು ಮತ್ತು ಅಧ್ಯಾಪಕರದ್ದು noble profession

ಎಂದು ನಾವು ನಮ್ಮ ಸಂಸ್ಕೃತಿಯಲ್ಲಿ ಕರೆಯುತ್ತೇವೆ. ಹಾಗಾಗಿ ಅವರು ಅವರ ಕರ್ತವ್ಯವನ್ನು ಚೆನ್ನಾಗಿ ಮಾಡಬೇಕೆಂಬುದು ಎಲ್ಲರ ನಿರೀಕ್ಷೆ ಇದೆ. ಅವರು ಮಾಡಿದ್ದಾರೆ, ಯಥಾಶಕ್ತಿ ಮಾಡುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಅವರಿಗೆ ಲಭ್ಯತೆ ಬೇಕಾದಂಥಾದ್ದು ಇಲ್ಲದೇ ಇದ್ದರೆ ಕಷ್ಟವಾಗಬಹುದು. ಅದರೆ ಇನ್ನೂ ಕೆಲವು suggestions ಬಂದಿವೆ. ಆಸ್ಪತ್ರೆಗಳಲ್ಲಿ Police out post ಒಂದು ಇರಬೇಕು. ಅದೇ ರೀತಿಯಲ್ಲಿ dentist ಗಳನ್ನು ಸೇರಿಸಬೇಕೆಂದು ಇದೆ. ನಾನು ಹೇಳುವುದೇನೆಂದರೆ Medicare ಎಂದ ಕೂಡಲೇ It includes dental care also. ಅದೇ ರೀತಿ ಇನ್ನು ಅನೇಕ ವಿಷಯಗಳು ಏನಿವೆ, ಅವು ಕಾನೂನಿನ ಪರಿಭಾಷೆಗಳ ಬಗ್ಗೆ ಹೇಳಿದ್ದಾರೆ. ನಾವು ಕಾನೂನು ಹೀಗೆ ಮಾತ್ರ ಆಗಬೇಕೆಂದು ಹೇಳುವಂಥಾದ್ದು. ನಮ್ಮ ಪ್ರಾರೂಪಕಾರರು ಇದ್ದಾರೆ, ಅವರು ಅದಕ್ಕೆ ಬೇಕಾದಂಥ ರೂಪವನ್ನು ಕೊಡುತ್ತಾರೆ. ಅದು ನಮ್ಮ ಭಾಷೆಯಲ್ಲಿ ಬರುವ ರೀತಿಯಲ್ಲಿ draft ಆಗಿದೆ. ಈಗ ಒಂದು ಸಂತೋಷದ ಸುದ್ದಿ ಏನೆಂದರೆ ತಾವು ಮಾತನಾಡುವಾಗ ಅದನ್ನು ಉಲ್ಲೇಖ ಮಾಡಿದ್ದೀರಿ. 815 ಜನ Medical Officers ಹೊಸದಾಗಿ recruit ಮಾಡಿ ಈಗ ಕೆಲವು ದಿವಸಗಳ ಹಿಂದೆ order ಕೊಟ್ಟಿದ್ದೇವೆ. ಅವರು ಅವರವರ ಸ್ಥಳಕ್ಕೆ ಅವರು ಹೋದಾಗ ಅವರಿಗೆ ಅನೇಕ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಬೇರೆ ಆಸ್ಪತ್ರೆಗಳಲ್ಲಿ ಆವರ ಲಭ್ಯತೆ ಸಿಕ್ಕಿದೆ. ಇನ್ನು dial 108 ಬಗ್ಗೆ ಒಬ್ಬ ಸದಸ್ಯರು ಮಾತ್ರ ಬೇಸರವಾಗಿ ಮಾತನಾಡಿದರು. ಅದರೆ ನನಗೆ ತಿಳಿದ ಪ್ರಕಾರ ನಾನು ಕೆಲವೊಮ್ಮೆ ಮಾತನಾಡಿದ್ದು ಉಂಟು, ಅವರು receive ಮಾಡಿದ್ದು ಉಂಟು. ಪ್ರತಿ ಸಾರಿ receive ಮಾಡುತ್ತಾರೆ. ಆಗ ಅವರು ಏನು ಎಂದು ಕೇಳಿದಾಗ ನಾನು Home Minister ಮಾತನಾಡುತ್ತಿದ್ದೇನೆ, ವ್ಯವಸ್ಥೆ ಸರಿ ಇದೆಯೇ, ಇಲ್ಲವೇ ಎಂದು ಕೇಳುವುದಕ್ಕೆ ಮಾತನಾಡುತ್ತಿದ್ದೇನೆಂದು ಹೇಳಿದಾಗ, ನನಗೆ ಸರಿಯಾದ ರೀತಿಯಲ್ಲಿ response ಅಲ್ಲಿಂದ ಬಂದಿದೆ. ಇನ್ನು paramedical ಇದು ಬಹಳ ಅಗತ್ಯ, ನಮ್ಮ medical treatmentಗೆ ಆಧಾರ ಆಗಿರುವಂಥಾದ್ದು, ಈ paramedical reports, laboratory support. ಇದನ್ನು ನಾವು investigative tool ಎಂದು ನಾವು ಹೇಳುತ್ತೇವೆ. 5,235 Paramedical staff ಅನ್ನು recruit ಮಾಡುವ ಬಗ್ಗೆ ಅಂತಿಮ ಹಂತದಲ್ಲಿದ್ದೇವೆ, ಹಾಗಾಗಿ ಅದು ಸಾಕು. ಆದರೆ ಅನೇಕರು health and

family welfareನ ಕೆಲವೊಂದು ಸಮಸ್ಯೆಗಳನ್ನು ಹೇಳಿದ್ದಾರೆ. ನಾನು ಆ ಬಗ್ಗೆ notes ಬರೆದುಕೊಂಡಿದ್ದೇನೆ. ಈ ವಿಷಯವನ್ನು ಸಂಬಂಧಪಟ್ಟವರಿಗೆ ತಿಳಿಸುತ್ತೇನೆ. ಈಗ ಪ್ರಮುಖವಾಗಿ ಬಂದಿರುವಂಥಾದ್ದು.......

ಶ್ರೀ ನೆ.ಲ. ನರೇಂದ್ರಬಾಬು :- ನಾವು ವೈದ್ಯರಿಗೆ ಸಂಬಳ ಹೆಚ್ಚಿಗೆ ಮಾಡುವ ವಿಚಾರವನ್ನು ಕೇಳಿದ್ದೆವು. ಸಂಬಳ ಜಾಸ್ತಿ ಮಾಡದೆ ಇದ್ದರೆ ಅವರು ಸಿಟ್ಟಿನಿಂದ ಕೆಲಸ ಮಾಡುತ್ತಾರೆ, ಸಂಬಳ ಜಾಸ್ತಿ ಮಾಡಿದರೆ ಪ್ರೀತಿಯಿಂದ ಕೆಲಸ ಮಾಡುತ್ತಾರೆ.

ಡಾ॥ ವಿ.ಎಸ್. ಆಚಾರ್ಯ :- ಅವರ ಪ್ರಾರಂಭಿಕ ಸಂಬಳ ಏನು ಕಡಿಮೆ ಇದೆ, ಅದನ್ನು ಸ್ವಲ್ಪ ಹೆಚ್ಚಿಗೆ ಮಾಡಬೇಕೆಂಬ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ. ನಾವು ಅದನ್ನು ಮಾಡುತ್ತೇವೆ. ಇನ್ನು ಇವತ್ತು ತಂದಿರುವಂಥ ಬಿಲ್, ಇದು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಹೆಚ್ಚು ಕಡಿಮೆ ಇದೇ ರೀತಿಯ ಕಾಯಿದೆ ಪಕ್ಕದ ತಮಿಳು ನಾಡಿನಲ್ಲಿ, ಆಂಧ್ರಪ್ರದೇಶದಲ್ಲಿ ಇದೆ. ನಾವು ಅಲ್ಲಿರುವುದನ್ನೇ ಇಲ್ಲಿಗೆ ತಂದು ಮಾಡಿದ್ದೇವೆ. ಅದಕ್ಕೆ ಕ್ರಮೇಣ ಏನಾದರೂ ತಿದ್ದುಪಡಿಯಾಗಬೇಕೆಂದರೆ, ಅದು ತಮಗೂ ಗೊತ್ತಿರುವ ಹಾಗೆ ಕಾಯಿದೆ ಬಂದಮೇಲೆ, ಅದು ಆಚರಣೆಗೆ ಬರುವಾಗ ಏನಾದರೂ ಹೆಚ್ಚು ಕಡಿಮೆಯಾದಾಗ....

ಶ್ರೀ ನೆ.ಲ. ನರೇಂದ್ರಬಾಬು :- Bailable ಮಾಡಬೇಕೆನ್ನುವಂಥಾದ್ದು, ಏಕೆಂದರೆ 353 ಇದ್ದಾಗ ಮತ್ತೊಂದು ಕಾನೂನನ್ನು ತಂದಿದ್ದೀರಿ, ಮತ್ತೆ bailable ಮಾಡುವಂಥಾದ್ದು ಸೂಕ್ತ. ಇಲ್ಲಿ ಬಡಪಾಯಿಗಳು spoil ಆಗುತ್ತಾರೆ. ಮಾನ್ಯ ಸಚಿವರೇ, ಮತ್ತೆ Nursing Home Bill ಇಲ್ಲಿ pass ಆಗಿತ್ತು. ಅದು ಅನುಷ್ಠಾನವಾಗುತ್ತಿಲ್ಲ. ಮಾನ್ಯ ಆಶೋಕ್‌ರವರು ಆರೋಗ್ಯ ಸಚಿವರಾಗಿದ್ದಾಗ ಹೇಳಿದ್ದರು. ಇವತ್ತು nursing homeಗಳಿಗೆ ಹೋದರೆ ಜನಗಳು ಶೋಷಣೆಗೆ ಒಳಗಾಗುತ್ತಾರೆ. ಶೋಷಣೆಯಿಂದ ಮುಕ್ತರಾಗಬೇಕು. ದಯವಿಟ್ಟು ಈ ಬಗ್ಗೆ ಮಾನ್ಯ ಆಶೋಕ್‌ರವರು ಇಲ್ಲಿ ಇದ್ದಾರೆ. ಇದನ್ನು ಹಿಂದೆ ಪ್ರಸ್ತಾಪ ಮಾಡಿದ್ದರು. ತಾವು ಅದನ್ನು ಹೇಳಬೇಕು.

ಡಾ॥ ವಿ.ಎಸ್. ಆಚಾರ್ಯ :- ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ ಏನೆಂದರೆ, ಮಾನ್ಯ ಸದಸ್ಯರು ಮತ್ತು ನಾವೆಲ್ಲರೂ ತಿಳಿದುಕೊಳ್ಳಬೇಕು. ಇವತ್ತು professional competence and excellence in service ಇಲ್ಲದಿದ್ದರೆ ಅಲ್ಲಿಗೆ ಯಾರೂ ಹೋಗುವುದಿಲ್ಲ. ಇವತ್ತು Health

care ಒಂದು competitive field ಆಗಿದೆ. ಹಾಗಾಗಿ health careನಲ್ಲಿ ಎಲ್ಲಿ ಒಳ್ಳೆಯ ಗಮನವನ್ನು ಕೊಡುತ್ತಾರೆ, ಒಳ್ಳೆಯ ಆರೈಕೆಯನ್ನು ಕೊಡುತ್ತಾರೆ...

ಶ್ರೀ ನೆ.ಲ. ನರೇಂದ್ರಬಾಬು :- ಸರ್ಕಾರಿ ಆಸ್ಪತ್ರೆಗಳಲ್ಲಿ ಪರಿಣಿತಿ ಪಡೆದಂಥ ಡಾಕ್ಟರ್‌ಗಳನ್ನು ನಿಮ್ಮ ಸರ್ಕಾರದ ಇಲಾಖೆಯಿಂದಲೇ ಕಾಲೇಜುಗಳಿಗೆ ಕಳುಹಿಸಿದ್ದಾರೆ. ಇವತ್ತು ಆಸ್ಪತ್ರೆಗಳಲ್ಲಿ ಪರಿಣಿತ ಸಿಬ್ಬಂದಿಗಳಿಲ್ಲ. ಇನ್ನು ಒಳ್ಳೆಯ service ಅನ್ನು ಹೇಗೆ ಕೊಡುತ್ತೀರಾ? ಅಲ್ಲಿ roster system ಅನ್ನು ಪಾಲನೆ ಮಾಡಿಲ್ಲ, ಮತ್ತೆ ಒಳ್ಳೆಯ ಡಾಕ್ಟರ್‌ಗಳನ್ನು ಕಾಲೇಜುಗಳಿಗೆ ಹಾಕಿದ್ದೀರಿ. ಇದರಿಂದ ಜನರಿಗೆ ಸಿಟ್ಟು ಬರದೇ ಇನ್ನು ಏನು ಆಗುತ್ತದೆ?

ಡಾ॥ ವಿ.ಎಸ್. ಆಚಾರ್ಯ :- ಆ ಬಗ್ಗೆಯೂ ನಾವು ಗಮನ ಹರಿಸುತ್ತೇವೆ.

ಶ್ರೀ ಎಂ.ಟಿ. ಕೃಷ್ಣಪ್ಪ :- 3 ವರ್ಷ punishment ಎಂದು ಇರುವುದನ್ನು ಕಡಿಮೆ ಮಾಡಿ. ಆರು ತಿಂಗಳು ಮಾಡಿ, six months are enough.

(ಗೊಂದಲ)

ಡಾ॥ ವಿ.ಎಸ್. ಆಚಾರ್ಯ :- ಈಗ ವಿಧೇಯಕವನ್ನು ಅಂಗೀಕರಿಸಬೇಕೆಂದು ನಾನು ವಿನಂತಿಸುತ್ತೇನೆ.

ಅಧ್ಯಕ್ಷರು :- ಈಗ ಪರ್ಯಾಲೋಚನಾ ಪ್ರಸ್ತಾವ.

ಶ್ರೀ ನೆ.ಲ. ನರೇಂದ್ರ ಬಾಬು :- ಶಿಕ್ಷೆ 3 ವರ್ಷ ಎಂದು ಮಾಡತಕ್ಕಂಥಾದ್ದು ಸರಿಯಲ್ಲ, ಮಾರ್ಪಾಡು ಮಾಡಿ.

ಅಧ್ಯಕ್ಷರು :- ನೀವು ಹೇಳಿದ್ದೀರಿ.

ಶ್ರೀ ನೆ.ಲ. ನರೇಂದ್ರ ಬಾಬು :- ನಾವೆಲ್ಲ ಮೌನವಾಗಿ ಇದಕ್ಕೆ ಸಮ್ಮತಿ ಕೊಡಬೇಕೆಂದರೆ ಇದನ್ನು ಮಾರ್ಪಾಡು ಮಾಡಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ :- 3 ವರ್ಷ ಜಾಸ್ತಿಯಾಯಿತು, ದಯವಿಟ್ಟು ಕಡಿಮೆ ಮಾಡಿ.

ಶ್ರೀ ಬಿ.ಸಿ. ಪಾಟೀಲ್ :- ಬೇಲಬಲ್ ಎಂದು ಮಾಡಿ.

(ಗೊಂದಲ)

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

"2009ರ ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 7ರವರೆಗೆ

ಅಧ್ಯಕ್ಷರು :- ಖಂಡ 2 ರಿಂದ 7 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 7ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಡಾ|| ವಿ.ಎಸ್. ಆಚಾರ್ಯ, ಗೃಹ ಸಚಿವರು (ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

"2009ರ ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಡಾ|| ವಿ.ಎಸ್. ಆಚಾರ್ಯ :- ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಧೇಯಕವಿದೆ.

ಅಧ್ಯಕ್ಷರು :- ಈಗ ಆಗುವುದಿಲ್ಲ, ಈಗಾಗಲೇ 5 ವಿಧೇಯಕಗಳು ಆಗಿವೆ. ಈಗ ಬೇರೆ ವಿಷಯಗಳನ್ನು ತೆಗೆದುಕೊಳ್ಳೋಣ. ನೀರಾವರಿ ಯೋಜನೆಗಳ ಬಗ್ಗೆ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳ ಶಾಸಕರು ಕೊಟ್ಟಿರುವ ಒಂದು ವಿಷಯ ನಿಯಮ 69 ರಡಿಯಲ್ಲಿ ಇದೆ. ಹಾಗೆಯೇ, ತಮ್ಮದೊಂದು ಗಣಿಗಾರಿಕೆಯದ್ದು ಇದೆ. ರೇವಣ್ಣನವರದ್ದು ಒಂದು ಇದೆ.

(ಗೊಂದಲ)

ಅಧ್ಯಕ್ಷರು :- ನೀರಾವರಿ ಸಚಿವರು ಇಲ್ಲ ಎಂದು ಮುಖ್ಯಮಂತ್ರಿಗಳು ತಿಳಿಸುತ್ತಿದ್ದಾರೆ. ಹಾಗಾಗಿ ಅದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಈಗ ನೀರಾವರಿ ಸಚಿವರು ಇಲ್ಲವಲ್ಲ. ಹಾಗಾಗಿ ಗಣಿಗಾರಿಕೆ ವಿಷಯವನ್ನು ತೆಗೆದುಕೊಳ್ಳಿ. ಇದು ಚರ್ಚೆಯಾಗಿ ಇದಕ್ಕೆ reply ಕೊಡಬೇಕು.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅದ್ಯಕ್ಷರೆ, ದಯಮಾಡಿ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಬೇಕು.